
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2020
ಬೆಲೆ ರೂ. 1




## ರಾಜಪಥದಲ್ಲಿ ಕಂಡ

# ಅನುಭವ ಮಂಟಪ



ದೆಹಲಿ ಕರ್ನಾಟಕ ಸಂಘದ ವತಿಯಿಂದ ಈಚೆಗೆ ಕೊಡಗಿನಲ್ಲಿ ಸಂಭವಿಸಿದ ಅತಿವೃಷ್ಟಿಯಲ್ಲಿ ಸಂಕಷ್ಟಕ್ಕೀಡಾದ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ಹಣಕಾಸಿನ ನೆರವು ನೀಡಲಾಯಿತು. ದಿನಾಂಕ 30.01.2020 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ 5,88,501/– (ಐದು ಲಕ್ಷ ಎಂಬತ್ತೆಂಟು ಸಾವಿರದ ಐನೂರು ಒಂದು ರೂಪಾಯಿಗಳು) ಹಣವನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಆರ್. ರೇಣುಕುಮಾರ್ ಉಪಸ್ಥಿತರಿದ್ದರು. ಈ ಹಿಂದೆ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಒಂದು ಕೋಟಿ ರೂಪಾಯಿ ಅನುದಾನವನ್ನು ನೀಡಲಾಗಿತ್ತು. ಈ ಹಣವನ್ನು ತ್ವರಿತಗತಿಯಲ್ಲಿ ಬಿಡುಗಡೆ ಮಾಡಬೇಕೆಂದು ವಿನಂತಿಸಿಕೊಳ್ಳಲಾಯಿತು ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಂದಿಸಿ ಆದಷ್ಟು ಬೇಗನೆ ಬಿಡುಗಡೆ ಮಾಡುವ ಭರವಸೆ ನೀಡಿದ್ದಾರೆ.



ಭಾರತ ಮಾತೆಗೆ ನಮಿಸುತ್ತಿರುವ ಬಾಲಕ ಸರ್ಗಮ್. ಈ ಅಪರೂಪದ ಭಾವಚಿತ್ರವನ್ನು ನೀಡಿದವರು ಸಂಘದ ಆಜೀವ ಸದಸ್ಯ ಆನಂದ ಮುರಗೋಡ. ಸರ್ಗಮ್ ಮುರಗೋಡ ಅವರ ಸೋದರ ಸಂಬಂಧಿಯ ಪುತ್ರ.

> “ಮೂಡಣದಿ ಪಡುವಣದಿ ಗುಡುಗುಡಿಸಿ ಮೇಘಗಳೆ
> ಬಡಗಣದಿ ತೆಂಕಣದಿ ಸಾರುತಲೆ ಸಾಗುತಿರಿ
> ದಶದಿಶೆಗಳ ಸಾಗಿ ಬಾರ ಅನಿಲ ಹೊತ್ತು ಸಂ–
> ದೇಶವನು ಪರಿಮಳದ ಮಳೆಗರೆದು ಸುತ್ತೆಲ್ಲ”

*ಡಾ. ಸರೋಜಿನಿ ಮಹಿಷಿ*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಕರ್ನಾಟಕ ವಾರ್ತಾ ಕೇಂದ್ರ

ಸಂಪುಟ 30 । ಸಂಚಿಕೆ 5
ಫೆಬ್ರವರಿ 2020


# ಸಂಪಾದಕೀಯ

## ಸಾರಸ್ವತ ಲೋಕದ ಮರೆಯಲಾಗದ ಮಿತ್ರರು


ಆರು ವರ್ಷಗಳ ಹಿಂದೆ 'ವಿಜಯಪುರ' ಎಂದು ಮರುನಾಮಕರಣಗೊಂಡಿದ್ದ ಬಿಜಾಪುರ ಹಲವು ವೈಶಿಷ್ಟ್ಯಗಳ ಜಿಲ್ಲೆ. ಹನ್ನೆರಡನೆಯ ಶತಮಾನದಲ್ಲಿ ಜನಿಸಿದ ಕ್ರಾಂತಿಯೋಗಿ, ಭಕ್ತಿಭಂಡಾರಿ ಬಸವಣ್ಣನವರ ಜನ್ಮಸ್ಥಳ ಬಸವನ ಬಾಗೇವಾಡಿ ಇಲ್ಲಿದೆ. ಇಟಲಿಯ ರೋಮ್ ನಗರದ ಬೆಸಿಲಿಕಾ ಚರ್ಚ್ ಹೊರತುಪಡಿಸಿದರೆ ವಿಶ್ವದ ಅತ್ಯಂತ ದೊಡ್ಡ ಮಾನವ ನಿರ್ಮಿತ ಗುಂಬಜ್ ಎನಿಸಿಕೊಂಡಿರುವ 'ಗೋಲ ಗುಮ್ಮಟ'ವನ್ನು ಇಲ್ಲಿ ಕಾಣಬಹುದು. ಉರ್ದು, ಮರಾಠಿ ಮಿಶ್ರಿತ ವಿಶಿಷ್ಟ ಬಗೆಯ ಕನ್ನಡ, ಜೋಳದ ಆಹಾರ ಪದ್ಧತಿ, ಇಳಕಲ್ಲು ಸೀರೆ ತೊಡುವ ಮಹಿಳೆಯರು, ಖಾದಿ ಬಟ್ಟೆ ಧರಿಸುವ ಪುರುಷರು, ಕೋಮು ಸೌಹಾರ್ದತೆಯ ಜನಜೀವನ, ಹೀಗೆ ವೈವಿಧ್ಯಮಯ ಸಂಸ್ಕೃತಿಯ ವಿಜಯಪುರ ಸಾಹಿತ್ಯಿಕವಾಗಿಯೂ ಹಲವು ಪ್ರಥಮಗಳನ್ನು ಕಂಡಿದೆ ಎಂಬುದು ಆಸಕ್ತಿಯ ವಿಷಯ.

ಹೊಸಗನ್ನಡ ಸಾಹಿತ್ಯದ ಉಗಮವು ಈ ಪರಿಸರದಲ್ಲಿ ಆಗಿದೆ ಎಂದು ಸಾಹಿತ್ಯ ಚರಿತ್ರೆಯಲ್ಲಿ ಗುರುತಿಸಲಾಗಿದೆ. ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ನವೋದಯ ಸಾಹಿತ್ಯ ಈ ಭಾಗದಿಂದ ಬೆಳೆದು ಬಂದಿದೆ ಎಂಬುದು ಮಹತ್ವದ ಅಂಶ. ಇದಕ್ಕೆ ಮುಖ್ಯ ಕಾರಣ ವಿಜಯಪುರದ ಇಂಡಿ ತಾಲೂಕಿನ ಹಲಸಂಗಿಯ ನಾಲ್ಕು ಮಂದಿ ಸಾಹಿತ್ಯ ಮಿತ್ರರು. ಅನುಭಾವ ಕವಿ ಮಧುರಚೆನ್ನ, ಜನಪದ ತಜ್ಞ ಸಿಂಪಿ ಲಿಂಗಣ್ಣ, ರಾಷ್ಟ್ರಪ್ರೇಮಿ ಪಿ. ಧೂಲಸಾಹೇಬ ಮತ್ತು ಬಹುಮುಖ ಪ್ರತಿಭೆಯ ಕಾಪಸೆ ರೇವಪ್ಪ ಇವರ ನಡುವಿನ ಸ್ನೇಹ ಮತ್ತು ಸಾಹಿತ್ಯ ಪ್ರೀತಿಯಿಂದ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಲು ಸಾಧ್ಯವಾಯಿತು. 'ಹಲಸಂಗಿ ಗೆಳೆಯರು' ಎಂದು ಸಾರಸ್ವತ ಲೋಕ ಸದಾ ಕಾಲ ನೆನೆಯುವ ಈ ಗೆಳೆಯರ ಜೀವನ ಮತ್ತು ಸಾಧನೆಯ ಕುರಿತ ವಿಚಾರ ಸಂಕಿರಣ ಇದೇ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿರುವುದು ವಿಶೇಷ.

ಕರ್ನಾಟಕ ಸರಕಾರ ಸ್ಥಾಪಿಸಿದ ಹಲಸಂಗಿ ಗೆಳೆಯರ ಪ್ರತಿಷ್ಠಾನ ಮತ್ತು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಮುಂದಿನ ತಿಂಗಳು ಮಾರ್ಚ್ 15ರಂದು ನಡೆಯುವ ವಿಚಾರ ಸಂಕಿರಣದಲ್ಲಿ ವಿಜಯಪುರ ಭಾಗದ ಪ್ರಮುಖ ಸಾಹಿತಿಗಳು ಮಾತನಾಡಲಿದ್ದಾರೆ. ನೀವೂ ಬನ್ನಿ. ಭಾಗವಹಿಸಿ.



ಕವಿ ಮಧುರಚೆನ್ನ




ಹಲಸಂಗಿ ಗೆಳೆಯರ ಸಂಗ್ರಹ ಕಾರ್ಯ

'ಹಲಸಂಗಿ' ಎಂಬ ಹಳ್ಳಿಯಲ್ಲಿ ಜನಿಸಿದ ಮಧುರಚೆನ್ನರು ವರಕವಿ ಬೇಂದ್ರೆಯವರ ಆತ್ಮೀಯ ಒಡನಾಡಿಯಾಗಿದ್ದರು. ಹಲಸಂಗಿಯ ಹಳ್ಳಿಗರಲ್ಲಿ ಓದುವ ಹವ್ಯಾಸ ಮತ್ತು ಸೃಜನಶೀಲತೆಯನ್ನು ಬೆಳೆಸಿದರು. ಅವರ ಆಧ್ಯಾತ್ಮಿಕ ಸಂವೇದನೆಯ 'ನನ್ನ ನಲ್ಲ' ವಿಶಿಷ್ಟ ಕೃತಿ. ಹಲಸಂಗಿ ಗೆಳೆಯರು ಸಂಗ್ರಹಿಸಿದ 'ಗರತಿಯ ಹಾಡು' ಜಾನಪದ ಲೋಕಕ್ಕೆ ನೀಡಿದ ಸ್ಮರಣೀಯ ಕೊಡುಗೆ. ಇವರ ಇನ್ನೋರ್ವ ಗೆಳೆಯ ಓಲೆಕಾರ ಮಾದಣ್ಣನವರು ಲಾವಣಿ ಸಂಗ್ರಹ ಮತ್ತು ಗಾಯನಕ್ಕೆ ಹೆಸರಾಗಿದ್ದರು.

'ಕನ್ನಡ ನವೋದಯದ ಮುಂಗೋಳಿ' ಖ್ಯಾತಿಯ ಕವಿ ಮುದ್ದಣರ 150ನೇ ಜಯಂತಿಯನ್ನು ಈ ವರ್ಷ ಆಚರಿಸಲಾಗುತ್ತಿದೆ. ಮುದ್ದಣರಂತೆ ಅಲ್ಪಾಯುಷಿಯಾಗಿ ಮೇರು ಸಾಧನೆ ಮಾಡಿದ ಬೆರಗು ಪ್ರತಿಭೆ ಮಧುರಚೆನ್ನರದು. ಅವರು ಮತ್ತು ಅವರ ಹಲಸಂಗಿ ಗೆಳೆಯರ ಪ್ರಭಾವಳ ಎಂಬಂತೆ ವಿಜಯಪುರ ಭಾಗದಲ್ಲಿ ಮುಂದೆ ದಿ. ಡಿ.ಎಸ್. ಕರ್ಕಿ, ದಿ. ಡಾ. ಎಂ.ಎಂ. ಕಲಬುರ್ಗಿ, ಈಶ್ವರ ಸಣಕಲ್, ಗುರುಲಿಂಗ ಕಾಪಸೆ, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಮೊದಲಾದ ಮಹತ್ವದ ಸಾಹಿತಿಗಳು ಕನ್ನಡ ಸಾರಸ್ವತ ಲೋಕವನ್ನು ಬೆಳಗಿದ್ದಾರೆ.

ಮುಂದಿನ ತಿಂಗಳು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುವ ಹಲಸಂಗಿ ಗೆಳೆಯರ ಕುರಿತ ವಿಚಾರ ಸಂಕಿರಣ ನಮ್ಮ ಅರಿವನ್ನು ಇನ್ನಷ್ಟು ಹೆಚ್ಚಿಸಲಿದೆ ಎಂಬ ಆಶಯ ನಮ್ಮದು.

*ಡಾ. ಅವನೀಂದ್ರನಾಥ್ ರಾವ್*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 5
ಫೆಬ್ರವರಿ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ಡಾ. ಎಚ್. ಎಸ್. ವೆಂಕಟೇಶಮೂರ್ತಿ : ನೆನಪಿನ ದೋಣಿಯಲ್ಲಿ

ಕನ್ನಡದ ಖ್ಯಾತ ಕವಿ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇದೇ ಫೆಬ್ರುವರಿ 5 ರಂದು ಕಲಬುರ್ಗಿಯಲ್ಲಿ ಪ್ರಾರಂಭವಾದ 85 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಕನ್ನಡ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಪ್ರತಿ ವರ್ಷವೂ ನಡೆಯುವ ಈ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಕ್ಕೆ (ಮುಂದಿನ ಬಾರಿಯ 86 ನೇಯ ಸಮ್ಮೇಳನ ಹಾವೇರಿಯಲ್ಲಿ ಎಂದು ಘೋಷಣೆ ಮಾಡಲಾಗಿದೆ) ತುಂಬಾ ಪ್ರಾಮುಖ್ಯತೆಯಿದೆ. ಈ ಭಾಷಣ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಸಾಕಷ್ಟು ಬೆಳಕು ಚೆಲ್ಲಿದರೂ ಅದು ಒಟ್ಟಾರೆ ಕರ್ನಾಟಕದ ಮತ್ತು ಕನ್ನಡಿಗರ ಆಶಯಗಳನ್ನು ಧ್ವನಿಸುವಂತಿರುತ್ತದೆ. ಸಮನ್ವಯ ಕವಿ ಎಂದೇ ಹೆಸರಾದ ಡಾ. ವೆಂಕಟೇಶ ಮೂರ್ತಿಯವರ ಈ ಬಾರಿಯ ಭಾಷಣವೂ ಇದಕ್ಕೆ ಹೊರತಾಗಿಲ್ಲ. ಕನ್ನಡ ಭಾಷೆಯ ಬೆಳವಣಿಗೆ, ಅದರ ಮೇಲೆ ಇತರ ಭಾಷೆಗಳ, ಅದರಲ್ಲೂ ಪ್ರಮುಖವಾಗಿ ಹಿಂದಿ ಭಾಷೆಯ ಹೇರಿಕೆಯ ಕುರಿತಾಗಿ ಅವರು ವಿಸ್ತ್ರತವಾಗಿ ಮಾತನಾಡಿದ್ದಾರೆ. ಇದರ ಜೊತೆಗೆ ಇಂಗ್ಲೀಷ ಭಾಷೆಯ ಕುರಿತಾಗಿ ನಮ್ಮಲ್ಲಿ ಹೆಚ್ಚುತ್ತಿರುವ ಮೋಹದ ಬಗೆಗೂ ಅವರು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ನಮ್ಮ ಮುಂದೆ ಇರಿಸಿದ್ದಾರೆ. ಇದಲ್ಲದೆ ಕಲಬುರ್ಗಿಯ ಕಲ್ಯಾಣದ ಪುಣ್ಯ ಭೂಮಿಯಲ್ಲಿ ಹುಟ್ಟಿ ಬೆಳೆದ ಹಲವಾರು ಧೀಮಂತ ಮಹನೀಯರುಗಳ ಕುರಿತಾಗಿಯೂ ಅವರು ತಮ್ಮ ಭಾಷಣದಲ್ಲಿ ವಿಸ್ತಾರವಾಗಿ ಮಾತನಾಡಿದ್ದಾರೆ. ಕನ್ನಡ ಸಾಹಿತ್ಯಧಾರೆ ಹರಿದು ಬಂದ ದಾರಿಯ ಪುಟ್ಟ ಸಮೀಕ್ಷೆಯನ್ನು ಅವರು ಮಾಡಿದ್ದಾರೆ. ಗಡಿನಾಡ ಕನ್ನಡಿಗರ ಕುರಿತಾಗಿಯೂ ಅವರು ಕೆಲ ಮಾತುಗಳನ್ನು ಆಡಿದ್ದಾರೆ. ಗಡಿನಾಡಿನಲ್ಲಿರುವ ಕನ್ನಡಿಗರು ಎದುರಿಸಬೇಕಾದ ಭಾಷಾ ಸಂಕೀರ್ಣತೆಯ ಬಗೆಗೂ ಅವರು ಮಾತನಾಡಿದ್ದಾರೆ. ಅವರ ಮಾತಿನ ಜಾಲದಲ್ಲಿ ಅಮೇರಿಕೆಯ ಮತ್ತು ಸಿಂಗಪುರದ ವಿಚಾರಗಳೂ ಬಂದಿವೆ. ಆದರೆ, ಭಾರತದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಮತ್ತು ತಮ್ಮ ತಾಯ್ನಾಡಿನ ನೆಲ-ಜಲದ ನೆನಪಿನಲ್ಲಿ ಬದುಕುತ್ತಿರುವ ಹೊರನಾಡ ಕನ್ನಡಿಗರ ಬಗ್ಗೆ ಮತ್ತು ಅವರ ಸಮಸ್ಯೆಗಳ ಬಗ್ಗೆ ಅವರ ಭಾಷಣದಲ್ಲಿ ಇನ್ನೂ ಸ್ವಲ್ಪ ಜಾಗೆ ಸಿಗಬಹುದಿತ್ತು ಎಂಬುದು ನಮ್ಮೆಲ್ಲರ ಅಭಿಮತ.

ಏನೆ ಇರಲಿ, ಡಾ. ವೆಂಕಟೇಶ ಮೂರ್ತಿಯವರ ಭಾಷಣವೆಂಬುದು ಒಂದು ಬಗೆಯಲ್ಲಿ ಅವರ ಕವಿತ್ವದ ಹೃದಯವನ್ನು ಮತ್ತು ಕನ್ನಡ ಕವಿಧಾರೆಯ ಸೊಗಡನ್ನು ನಮಗೆಲ್ಲ ನವಿರಾಗಿ ಮುಟ್ಟಿಸಿದ ಭಾಷಣವೆಂಬುದನ್ನು ನಾವು ಮರೆಯಬಾರದು. ಕರ್ನಾಟಕದ ಮಧ್ಯೆ ಇರುವ ದಾವಣಗೆರೆ ಜಿಲ್ಲೆಯ ಹೋದಿಗೆರೆಯಲ್ಲಿ 1944 ರಲ್ಲಿ ಜನಿಸಿದ ಡಾ. ಮೂರ್ತಿಯವರು ತಮ್ಮ ಕಾವ್ಯ ಶಕ್ತಿಯನ್ನು ತಮ್ಮ ಈ ನೆಲ-ಜಲದಿಂದಲೆ ಕಂಡುಕೊಂಡವರು. ಅವರ ಈ ಬದುಕಿನ ಕಥನ ಅವರ ಕಾವ್ಯಮಯ ಗದ್ಯದಲ್ಲಿ 'ಅನಾತ್ಮ ಕಥನ' ವೆಂಬ ಸುರಳಿಯ ಮೂಲಕ ಕನ್ನಡಿಗರ ಜನಮನದಲ್ಲಿ ನೆಲೆ ನಿಂತಿದೆ. ಇದೇ ಅನಾತ್ಮ ಕಥನದ ಒಂದು ತುಣುಕನ್ನು ಅವರೇ 'ಹಸಿರು ರಿಬ್ಬನ್' ಎಂಬ ಚಲನಚಿತ್ರದ ಮೂಲಕ ನಿರ್ದೇಶಕರಾಗಿ ಪಡಿಮೂಡಿಸಿದ್ದಾರೆ. ಒಟ್ಟಾರೆ, ಕಾವ್ಯ, ಕಥನ, ಕಾದಂಬರಿ, ನಾಟಕ...ಹೀಗೆ ಅವರು ನಾನಾ ಸಾಹಿತ್ಯದ ಪ್ರಕಾರಗಳಲ್ಲಿ ತಮ್ಮ ಬರವಣಿಗೆಯ ಕೆಲಸವನ್ನು ಮಾಡಿದ್ದಾರೆ.

ಈಗ 75 ರ ವಸಂತದಲ್ಲಿರುವ ಡಾ. ವೆಂಕಟೇಶಮೂರ್ತಿಯವರು ಇನ್ನೂ ತಮ್ಮ ಲೇಖನಿಗೆ ಬಿಡುವನ್ನು ನೀಡಿಲ್ಲ. ಬರೆಯುತ್ತ ಸಾಗುವುದು ತನ್ನ ಕಾಯಕವೆಂಬುದು ಅವರ ಅಭಿಮತ. ಅವರ ಬರವಣಿಗೆಯ ಜೊತೆಜೊತೆಗೆ ಹಲವಾರು ಕನ್ನಡದ ಮನಗಳನ್ನು ಅವರು ಹುಟ್ಟುಹಾಕಿದ್ದಾರೆ. ಹೋದಿಗೆರೆ, ಹೊಳಲ್ಕೆರೆ ಮತ್ತು ಚಿತ್ರದುರ್ಗದಲ್ಲಿ ತಮ್ಮ ಓದಿನ ಕೆಲಸವನ್ನು ಮುಗಿಸಿ ಅವರು ಕೆಲಕಾಲ ಮಲ್ಲಾಡಿ ಹಳ್ಳಿಯ ಶಾಲೆಯಲ್ಲಿ ವಿಜ್ಞಾನದ ಪರಿಚಾರಕರಾಗಿಯೂ ಕೆಲಸ ಮಾಡಿದ್ದರು. ಆದರೆ, ಅವರ ಸಾಹಿತ್ಯದ ಓದಿನ ಆಸಕ್ತಿ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಕರೆ ತಂದಿತು. ಅಲ್ಲಿ ಅವರು ಡಾ. ಜಿ.ಎಸ್. ಶಿವರುದ್ರಪ್ಪನವರ ವಿದ್ಯಾರ್ಥಿಗಳಾಗಿ ತಮ್ಮ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರದಲ್ಲಿ ಸೈಂಟ್ ಜೋಸೆಫ್ ಕಾಮರ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ, ನಂತರದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತ ಕನ್ನಡ ಕಥನ ಕಾವ್ಯಗಳ ಮೇಲೆ ತಮ್ಮ ಡಾಕ್ಟರೇಟ್ ಪ್ರಭಂದವನ್ನು ಡಾ. ಜಿ. ಎಸ್. ಶಿವರುದ್ರಪ್ಪನವರಡಿಯಲ್ಲೇ ಮುಗಿಸಿದರು.

ಸುಮಾರು ಮೂರು ದಶಕಗಳ ಕಾಲ ಬೆಂಗಳೂರಿನ ಬ್ರಿಗೇಡ ರಸ್ತೆಯಲ್ಲಿರುವ ಮತ್ತು ಪೂರಾ ಇಂಗ್ಲೀಷಮಯವಾಗಿದ್ದ ಸೈಂಟ್ ಜೋಸೆಫ್ ಕಾಮರ್ಸ್ ಕಾಲೇಜಿನ ಕನ್ನಡ ಮೇಷ್ಟ್ರಾಗಿದ್ದಷ್ಟೇ ಅಲ್ಲ, ಅಲ್ಲಿ ವಿದ್ಯಾರ್ಥಿಯಾಗಿದ್ದ ನಾನು ಮತ್ತು ಕೆಲ ಸ್ನೇಹಿತರು ಜೊತೆಯಾಗಿ ಅವರ ಮಾರ್ಗದರ್ಶನದಲ್ಲಿ ಕನ್ನಡ ಸಂಘವನ್ನು ಕಟ್ಟಿದೆವು. ಈ ಬ್ರಿಗೇಡ್ ರಸ್ತೆಯ ಕನ್ನಡ ಸಂಘ ಮುಂದಿನ ಸುಮಾರು ಮೂರು ದಶಕಗಳ ಕಾಲ ಅದ್ಭುತವಾದ ಕೆಲಸವನ್ನು ಮಾಡಿತು. ಅದರ ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ನಾನು ಕೆಲಸ ಮಾಡಿದ್ದೆ. ನಮ್ಮ ಪ್ರೀತಿಯ ಗುರುಗಳಾದ ಡಾ. ವೆಂಕಟೇಶಮೂರ್ತಿಯವರು ಅದರ ಅಧ್ಯಕ್ಷರಾಗಿ ಅಲ್ಲಿ ಕನ್ನಡವನ್ನು ಕಟ್ಟುವ ಕೆಲಸವನ್ನು ಮಾಡಿದರು. ಹಲವಾರು ಪುಸ್ತಕಗಳ ಪ್ರಕಟಣೆ (ನಮ್ಮ ಮೊದಲ ಪ್ರಕಟಣೆ 1978 ರಲ್ಲಿ 'ಭರವಸೆ' ಎಂಬ ಕವನ ಸಂಕಲನ), ಕನ್ನಡ ನಾಟಕಗಳು, ಕನ್ನಡ ಕಾಲೇಜು ಪತ್ರಿಕೆ...ಹೀಗೆ ಹಲವಾರು ಚಟುವಟಿಕೆಗಳನ್ನು ನಾವು ಹಮ್ಮಿಕೊಂಡಿದ್ದೆವು. ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳು, ಅಡಿಗರು, ಅನಂತಮೂರ್ತಿಯವರು, ಶಿವರುದ್ರಪ್ಪನವರು...ಹೀಗೆ ಈ ಕನ್ನಡ ಸಾಹಿತ್ಯದ ದಿಗ್ಗಜರ ದಂಡು ನಮ್ಮ ಕಾಲೇಜಿನ ಆವರಣಕ್ಕೆ ಬರುವಂತಾಯಿತು.

ನಂತರದಲ್ಲಿ ಅವರು ನಾಲ್ಕಾರು ವರ್ಷಗಳ ಮೊದಲೆ ಕಾಲೇಜಿನಿಂದ ನಿವೃತ್ತಿ ಪಡೆದು ತಮ್ಮನ್ನು ಬರವಣಿಗೆ ಮತ್ತು ಸಾಹಿತ್ಯದ ಕೆಲಸಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಂಡರು. ನಾನು ನನ್ನ ಈ ವಿಶಿಷ್ಟವಾದ ಕಾಲೇಜನ್ನು ಬಿಟ್ಟು ನಾಲ್ಕು ದಶಕಗಳೇ ಕಳೆದರೂ ನನ್ನ ಪ್ರೀತಿಯ ಮೇಷ್ಟ್ರರೊಂದಿಗೆ ನನ್ನ ಸಾಹಿತ್ಯದ ಮತ್ತು ಬರವಣಿಗೆಯ ಅಭ್ಯಾಸದ ಸಂಬಂಧ ನಿರಂತರವಾಗಿದೆ.

ದೇಶದ ಈಗಿನ ಸಂದರ್ಭದಲ್ಲಿ ಡಾ. ವೆಂಕಟೇಶಮೂರ್ತಿಯವರು ಈ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿದ್ದು ಸಮಯೋಚಿತ. ಅವರ ಮನೋಧರ್ಮ ಅತ್ಯಂತ ಸಾತ್ವಿಕವಾದದ್ದು. ಅವರು ಕನ್ನಡದ ಸಾಹಿತ್ಯ ಪರಂಪರೆಯ ಎಲ್ಲ ಪ್ರಕಾರಗಳನ್ನು ಕಂಡವರು. ಅವರ ವಿದ್ವತ್ತು ಮತ್ತು ಸದಾ ಚಿಂತನಶೀಲ ಮನಸ್ಸು, ಕಾವ್ಯಮಯ ಮನಸ್ಸು...ಅವರ ಸಾಹಿತ್ಯಿಕ ಮತ್ತು ಸಮಾಜ ಪ್ರಜ್ಞೆಯನ್ನು ಒಂದು ಬಗೆಯ ಸಮನ್ವಯತೆಯಲ್ಲಿರಿಸಿದೆ. ಅವರದೇ ಆದ ರೀತಿಯಲ್ಲಿ ಅವರು ಪರಂಪರೆ ಮತ್ತು ಅಧುನಿಕತೆಯನ್ನು ಮುಖಾಮುಖಿಯಾಗಿ ಎದುರಿಸುತ್ತಾರೆ. ಅವರನ್ನು ಈ ಕುರಿತಾಗಿ ವಿಮರ್ಶಿಸುವವರೂ ಇದ್ದಾರೆ. ಏನೇ ಇದ್ದರೂ, ಬದುಕಿನ ಎಲ್ಲ ಒಳ್ಳೆಯತನವನ್ನು ಒಳಗೊಂಡು ಬದುಕುವುದು ಅವರ ಸಾಮರಸ್ಯ ಚಿಂತನೆಯ ಭಾಗವಾಗಿದೆ.

ಡಾ. ವೆಂಕಟೇಶಮೂರ್ತಿಯವರು ಅಧ್ಯಕ್ಷರಾದದ್ದು ಸರಿ. ಅವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರು ನಮ್ಮ ಈ ದೆಹಲಿ ಕರ್ನಾಟಕ ಸಂಘಕ್ಕೆ ಹಲವಾರು ಬಂದಿದ್ದನ್ನೂ ನಾವು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇವೆ. ಆದರೆ, ನಮ್ಮ ಈ ಕನ್ನಡ ಸಾಹಿತ್ಯ ಪರಿಷತ್ತು ಈ ಕಲಬುರ್ಗಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಹೊರನಾಡ ಕನ್ನಡ ಸಂಘಗಳಲ್ಲಿ ಪ್ರಮುಖವಾದ ಸಂಘಟನೆಯಾದ ದೆಹಲಿ ಕರ್ನಾಟಕ ಸಂಘವನ್ನು ಮರೆತು ಬಿಟ್ಟದ್ದು ನಮಗೆಲ್ಲ ಆಶ್ಚರ್ಯವನ್ನುಂಟು ಮಾಡಿದೆ. ನನ್ನ ಅರಿವಿನಲ್ಲಿರುವಂತೆ ಯಾವುದೇ ಆಮಂತ್ರಣ, ಹೊರನಾಡ ಕನ್ನಡಿಗರ ಗೋಷ್ಠಿ...ಇತ್ಯಾದಿಗಳಿಗೆ ನಮ್ಮ ನೆನಪು ಕನ್ನಡ ಸಾಹಿತ್ಯ ಪರಿಷತ್ತಿಗೆ ಆದಂತಿಲ್ಲ. ಅದರ ಅಧ್ಯಕ್ಷರ ಅವಗಾಹನೆಗೆ ಇದನ್ನು ತರುತ್ತ ನನ್ನ ಈ ನಾಲ್ಕು ಸಂತಸದ ನಮನಗಳನ್ನು ಸಮನ್ವಯ ಕವಿ ಮತ್ತು ನನ್ನ ಮೇಷ್ಟ್ರು ಡಾ. ವೆಂಕಟೇಶ ಮೂರ್ತಿಯವರಿಗೆ ಅರ್ಪಿಸುತ್ತೇನೆ.

*ಡಾ. ವೆಂಕಟಾಚಲ ಹೆಗಡೆ*
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯ ಬಂಧುಗಳೇ, ಮಕರ ಸಂಕ್ರಾಂತಿಯ ಶುಭಾಶಯಗಳೊಂದಿಗೆ ಪ್ರಸ್ತುತ ವರ್ಷದಲ್ಲಿ ಅನೇಕ ಕಾರ್ಯಕ್ರಮಗಳು ನಡೆಯಬೇಕಾಗಿವೆ. ಈ ಬಾರಿ ಹತ್ತು ಕ್ರಿಕೆಟ್ ತಂಡಗಳು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಕ್ರಿಕೆಟ್‌ಗಳಲ್ಲಿ ಭಾಗವಹಿಸಿ ಅತೀ ಹೆಚ್ಚು ಕನ್ನಡಿಗರು ದೆಹಲಿಯ ತಾಲ್ಕತೋರ ಕ್ರಿಕೆಟ್ ಮೈದಾನಕ್ಕೆ ಬಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಬಂದ ಎಲ್ಲ ತಂಡಗಳ ಮತ್ತು ಗೆದ್ದು ಬಂದ ದೆಹಲಿ ತುಳುಸಿರಿ ತಂಡಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.

ಬರುವ ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜೊತೆಗೆ ವಾರ್ಷಿಕ ಆಟೋಟ ಸ್ಪರ್ಧೆಗಳು ಮತ್ತು ವಾರ್ಷಿಕೋತ್ಸವ ನಡೆಯಲಿದೆ. ವಾರ್ಷಿಕೋತ್ಸವದಲ್ಲಿ ಸಮೂಹ ಜಾನಪದ ನೃತ್ಯ, ಕರ್ನಾಟಕ ಶೈಲಿ ಇರುವಂಥ ಜಾನಪದ ನೃತ್ಯಗಳು ಇವೆ. ಭಾಗವಹಿಸಿ. ಮಾರ್ಚ್ ತಿಂಗಳಲ್ಲಿ ಮಾರ್ಚ್ ಕೊನೆಯ ದಿನಾಂಕದಂದು ಈ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತದೆ. ಇದರಿಂದ ಈಗಾಗಲೇ ನಾಟಕೋತ್ಸವ ನಡೆದಿದ್ದು ಮೂರು ನಾಟಕಗಳು ಸ್ಥಳೀಯವಾಗಿ ಭಾಗವಹಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಭಾಗವಹಿಸಿದ ಮೂರು ನಾಟಕ ತಂಡಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತ ಬರುವ ಎಂಟರಂದು ಯಕ್ಷಗಾನ ನಡೆದಿದೆ. ಈ ಕಾರ್ಯಕ್ರಮ ನೀಡಿದ ಕೆರೆಮನೆ ಶಿವಾನಂದ ಹೆಗಡೆ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತ ಮತ್ತು ಇಪ್ಪತ್ತೆರಡರಂದು ಸಂಘದ ಸಹಯೋಗದೊಂದಿಗೆ ಪ್ರೊಫೆಸರ್ ರಾಧಾಕೃಷ್ಣ ಅವರು ಪುಸ್ತಕ ಬಿಡುಗಡೆಯನ್ನು ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ತಾವುಗಳು ಬನ್ನಿ. ಈ ಕಾರ್ಯಕ್ರಮದಲ್ಲಿ ಮಾನ್ಯ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್ ಮತ್ತು ಕರ್ನಾಟಕದ ಮಾಜಿ ಉಪಮುಖ್ಯಮಂತ್ರಿಗಳಾದ ಪರಮೇಶ್ವರ್ ಇನ್ನೂ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮ ಇಂಡಿಯಾ ಹೆಬಿಟೇಟ್ ಸೆಂಟರ್‌ರಲ್ಲಿ ನಡೆಯಲಿದೆ.

ವಾಲಿಬಾಲ್, ಕಬಡ್ಡಿ ಮತ್ತು ಆಟೋಟ ಸ್ಪರ್ಧೆಗಳು ನಡೆಯಲಿವೆ. ಆದಷ್ಟು ಬೇಗನೆ ಪರೀಕ್ಷೆಗಳನ್ನು ನೋಡಿಕೊಂಡು ಆಯೋಜನೆ ಮಾಡಲಾಗುತ್ತದೆ. ಇಪ್ಪತ್ತೊಂಬತ್ತನೇ ತಾರೀಖು ಇದೇ ತಿಂಗಳು ಕಾರ್ಮಿಕ ಸಂಘಗಳ ಒಕ್ಕೂಟ ಮತ್ತು ದೆಹಲಿ ಕರ್ನಾಟಕದ ಸಂಘದ ಸಂಯುಕ್ತ ಆಶ್ರಯದಲ್ಲಿ ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ದಯವಿಟ್ಟು ಇದರಲ್ಲಿ ಬಂದು ಭಾಗವಹಿಸಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

### ದೆಹಲಿ ಕರ್ನಾಟಕ ಸಂಘದಲ್ಲಿ
## ತಿಂಗಳ ಕಾರ್ಯಕ್ರಮ

**29 ಫೆಬ್ರವರಿ 2020** — ಶನಿವಾರ, ಸಂಜೆ : 4.00ಗಂಟೆಗೆ

ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ (ನೋಂ.) ಬೆಂಗಳೂರು ಇವರಿಂದ 'ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಮಾಧ್ಯಮವಾಗಿರಲಿ' ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ.

**8 ಮಾರ್ಚ್ 2020** — ಭಾನುವಾರ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

**14 ಮಾರ್ಚ್ 2020** — ಶನಿವಾರ

ನಾಗತಿಹಳ್ಳಿ ಚಂದ್ರಶೇಖರ್ ಅವರ 'ಇಂಗ್ಲೆಂಡ್ ವರ್ಸಸ್ ಇಂಡಿಯಾ' ಚಲನಚಿತ್ರ ಪ್ರದರ್ಶನ

**15 ಮಾರ್ಚ್ 2020** — ಭಾನುವಾರ

ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ
ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ
'ಹಲಸಂಗಿ ಗೆಳೆಯರ ಜೀವನ ಸಾಧನೆ' ವಿಚಾರ ಸಂಕಿರಣ

**22 ಮಾರ್ಚ್ 2020** — ಭಾನುವಾರ

ಟಿ.ಎಸ್. ನಾಗಾಭರಣ ನಿರ್ದೇಶನದ "ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ" ಸಂಗೀತಮಯ ನಾಟಕ. ಪ್ರಸ್ತುತಿ "ಬೆನಕ" ಮತ್ತು "ಸಂಗೀತ ಸಂಭ್ರಮ" ತಂಡ ಬೆಂಗಳೂರು

---

ಸಪ್ನ ಬುಕ್ ಹೌಸ್, ಬೆಂಗಳೂರು

ದೆಹಲಿ ಕರ್ನಾಟಕ ಸಂಘ ಸಹಯೋಗದಲ್ಲಿ

ಭಾರತದ ಮಾಜಿ ಪ್ರಧಾನಮಂತ್ರಿ

ಗೌರವಾನ್ವಿತ ಡಾ. ಮನಮೋಹನ ಸಿಂಗ್ ಅವರಿಂದ

Speeking Tiger ಪ್ರಕಟಿಸಿದ **Who is Bharat Mata?**
(By & on Pandit Jawaharlal Nehru)

ಇದರ ಕನ್ನಡ ಅನುವಾದ

**ಯಾರು ಭಾರತ ಮಾತೆ?**

ಪುಸ್ತಕ ಬಿಡುಗಡೆ

ಮೂಲ ಇಂಗ್ಲಿಷ್ : ಪ್ರೊ. ಪುರುಷೋತ್ತಮ ಅಗರ್‌ವಾಲ್
ಕನ್ನಡ ಅನುವಾದ : ಪ್ರೊ. ಕೆ.ಈ. ರಾಧಾಕೃಷ್ಣ

ದಿನಾಂಕ : 22.02.2020, ಶನಿವಾರ
ಸಂಜೆ 3.00-6.00 ಗಂಟೆಯವರೆಗೆ

**ಸ್ಥಳ :**

Gullmohar Hall, Habitat World at India Habitat Centre,
Gate No-3, on Vardhaman Road

ದಯಮಾಡಿ ಬನ್ನಿ ಮತ್ತು 15 ನಿಮಿಷಗಳ
ಮೊದಲೇ ಆಸೀನರಾಗಲು ವಿನಂತಿ

**RSVP :** C.M. Nagaraja : 98113 25440 / 99680 74409
Vasantha Shetty Bellare : 99586 97823
K.E. Radha Krishna : 98453 44054

# ಮನಸೂರೆಗೊಂಡ ಸಂಪತ್ತಿಗೆ ಸವಾಲ್




"ಯಾರೇ ಕೂಗಾಡಲಿ, ಊರೇ ಹೋರಾಡಲಿ..." ಎಂಬ ಹಾಡಿನ ಮೂಲಕ ಕನ್ನಡ ಚಲನಚಿತ್ರದಲ್ಲಿ ಅಚಲ ಸ್ಥಾನ ಪಡೆದ 'ಸಂಪತ್ತಿಗೆ ಸವಾಲ್' ಸಿನೆಮಾ ಯಾರಿಗೆ ಗೊತ್ತಿಲ್ಲ? ಸತತ ಒಂದು ವರ್ಷಗಳ ಕಾಲ ಬೆಳ್ಳಿಪರದೆಯ ಮೇಲೆ ರಾರಾಜಿಸಿದ ಆ ಸಿನೆಮಾದ ಕತೆ ಬರೆದವರು ಮಾತ್ರ ಅದೆಷ್ಟೋ ಜನರಿಗೆ ಗೊತ್ತೇ ಇಲ್ಲದ್ದು ಆಶ್ಚರ್ಯವೆಂದರೂ ತಪ್ಪಲ್ಲ. ಅಂಥ ಅದೆಷ್ಟೋ ಕತೆಗಳನ್ನು ಕನ್ನಡಿಗರಿಗೆ ನೀಡಿದ ಉತ್ತರ ಕರ್ನಾಟಕದ ಬಹುದೊಡ್ಡ ನಾಟಕಕಾರ ದಿ. ಶ್ರೀ ಪುಂಡಲೀಕಪ್ಪ ಬಸಪ್ಪ ಧುತ್ತರಗಿಯವರನ್ನು ಸ್ಮರಿಸಿಕೊಳ್ಳುವ ಹಾಗೂ ಅವರೇ ರಚಿಸಿದ 'ಸಂಪತ್ತಿಗೆ ಸವಾಲ್' ನಾಟಕವನ್ನು ವೀಕ್ಷಿಸುವ ಅವಕಾಶವನ್ನು ದೆಹಲಿ ಕರ್ನಾಟಕ ಸಂಘ ಪಡೆದುಕೊಂಡಿತು.

ಸಂಘದ ಸಭಾಂಗಣದಲ್ಲಿ ಜನವರಿ 12ರಂದು ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎಂ ನಾಗರಾಜ್ ಅವರು ಬಾಗಲಕೋಟದ ಪಿ.ಬಿ ಧುತ್ತರಗಿ ಟ್ರಸ್ಟ್ (ಸೂಳೇಬಾವಿಯ) ಸದಸ್ಯರಾದ ಮಹಾಂತೇಶ ಗಜೇಂದ್ರಗಡ, ಚಂದ್ರಶೇಖರ ದೇಸಾಯಿ ಹಾಗೂ ಇಳಕಲ್ಲಿನ ವಿಜಯ ಕಲಾ ನಾಟ್ಯ ಸಂಘದ ಅಧ್ಯಕ್ಷ ರಮೇಶ ಮಡಿವಾಳರ ಅವರನ್ನು ಸ್ವಾಗತಿಸಿ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಹಾಂತೇಶ ಗಜೇಂದ್ರಗಡ ಅವರು ಧುತ್ತರಗಿ ಟ್ರಸ್ಟ್ ನಡೆದು ಬಂದ ದಾರಿಯನ್ನು ವಿವರಿಸಿದರು. ತಾವು ಕಳೆದ 40 ವರ್ಷಗಳಿಂದ ಕಲಾಸೇವೆ ಮಾಡುತ್ತ ಬಂದಿದ್ದು ಇದೀಗ ತಮಗೆ ದೆಹಲಿಯ ಕರ್ನಾಟಕ ಸಂಘದಲ್ಲಿ 'ಸಂಪತ್ತಿಗೆ ಸವಾಲ್' ನಾಟಕವನ್ನು ಪ್ರಾಯೋಜಿಸುವ ಅವಕಾಶ ದೊರೆತಿರುವುದು ಅತ್ಯಂತ ಸಂತೋಷವಾಗಿದೆ ಎಂದರು. ಚಂದ್ರಶೇಖರ ದೇಸಾಯಿಯವರು ಮಾತನಾಡುತ್ತ ಕನ್ನಡ ನಾಟಕ ರಂಗಕ್ಕೆ ಪಿ.ಬಿ. ಧುತ್ತರಗಿಯವರು ನೀಡಿದ ಕೊಡುಗೆಯನ್ನು ಸ್ಮರಿಸಿದರು. ಕನ್ನಡ ಸಾಹಿತ್ಯ ಮತ್ತು ರಂಗ ಚಟುವಟಿಕೆಗಳಿಗೆ ಪ್ರಸಕ್ತ ಕರ್ನಾಟಕ ಸರ್ಕಾರವು ಅತ್ಯಂತ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿದೆ, ಇದನ್ನು ಮುಂದೆಯೂ ಕೂಡಾ ಮುಂದುವರಿಸಿಕೊಂಡು ಹೋಗಲಿ ಎಂದು ಆಶಿಸುವುದಾಗಿ ಹೇಳಿದರು. ಎರಡು ಸಾವಿರ ಕಿಲೋಮೀಟರ್ ದೂರದಿಂದ ಬಂದ ತಮಗೆ ಮತ್ತು ತಮ್ಮ ತಂಡಕ್ಕೆ ಅತ್ಯಂತ ಆತ್ಮೀಯ ಆದರಾತಿಥ್ಯ ತೋರಿದ ಕರ್ನಾಟಕ ಸಂಘಕ್ಕೆ ತಾವು ಚಿರ ಋಣಿಗಳಾಗಿದ್ದೇವೆ ಎಂದರು.

ಅಧ್ಯಕ್ಷೀಯ ಭಾಷಣ ಮಾಡಿದ ಡಾ. ಹೆಗಡೆಯವರು ಕರ್ನಾಟಕವು ರಂಗ ಚಟುವಟಿಕೆಗಳಿಗೆ ಮಾದರಿಯಾಗಿದೆ. ಮರಾಠಿ ರಂಗಭೂಮಿಯೂ ಕೂಡಾ ಕನ್ನಡ ರಂಗಭೂಮಿಯಿಂದ ಪ್ರಭಾವಿತವಾಗಿದೆ. ಯಕ್ಷಗಾನ, ನಾಟಕಗಳು ಅತ್ಯಂತ ಪ್ರಭಾವೀ ಮಾಧ್ಯಮಗಳಾಗಿದ್ದರೂ ಕೂಡಾ ಅವುಗಳ ಕಲಾವಿದರ ಆರ್ಥಿಕ ಸ್ಥಿತಿ ಇದುವರೆಗೂ ಸುಧಾರಿಸಿಲ್ಲ ಎಂಬುದನ್ನು ದಿ. ಶಂಭು ಹೆಗಡೆಯವರು ಆಗಾಗ ಹೇಳುತ್ತಿದ್ದರು ಎಂದು ಖೇದ ವ್ಯಕ್ತಪಡಿಸಿದರು. ಕಲಾವಿದರ ಸ್ಥಿತಿಗತಿಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕಾದ ಅಗತ್ಯವಿದೆ ಎಂದು ಹೇಳಿದರು.



ಅಣ್ಣಾವ್ರಿಗೆ ಖ್ಯಾತಿ ತಂದುಕೊಟ್ಟ ಸಂಪತ್ತಿಗೆ ಸವಾಲ್ ಸಿನೆಮಾಕ್ಕೆ ಮೂಲ ದಿ. ಪಿ.ಬಿ ಧುತ್ತರಗಿಯವರು ರಚಿಸಿದ ಸಂಪತ್ತಿಗೆ ಸವಾಲ್ ನಾಟಕ. ಧುತ್ತರಗಿ ಅವರು ಇನ್ನೂ ಅನೇಕ ಪ್ರಸಿದ್ಧ ನಾಟಕಗಳನ್ನು ರಚಿಸಿ ನಾಟಕ ತಂಡವನ್ನು ಕಟ್ಟಿ ಆಡಿಸಿ ಕಲೆಗಾಗಿ ತಮ್ಮ ಜೀವನವನ್ನೇ ಮುಡಿಪಿಟ್ಟವರು. ಅಂಥ ಮಹಾನ್ ನಾಟಕಕಾರರ ಹೆಸರಿನ ಟ್ರಸ್ಟ್ ಅವರಿಂದಲೇ ರಚಿತವಾದ ನಾಟಕವನ್ನು ಕರ್ನಾಟಕ ಸಂಘದ ವೇದಿಕೆಯಲ್ಲಿ ದೆಹಲಿಯ ಕನ್ನಡಿಗರಿಗಾಗಿ ಪ್ರದರ್ಶಿಸಿರುವುದು

ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ತಂಡವನ್ನು ಕರೆಯಿಸಿಕೊಳ್ಳುವುದಕ್ಕೆ ಮತ್ತು ನಾಟಕವನ್ನು ಪ್ರದರ್ಶಿಸುವುದಕ್ಕೆ ತೀವ್ರ ಮುತುವರ್ಜಿವಹಿಸಿದ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯ ಶಿವಾನಂದ ಇಂಗಳೇಶ್ವರರಿಗೆ ಈ ಸಂದರ್ಭದಲ್ಲಿ ಧನ್ಯವಾದ ಹೇಳಲೇಬೇಕೆಂದು ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಸಿ.ಎಂ. ನಾಗರಾಜ ಅವರು ಟ್ರಸ್ಟ್‌ನ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ವಿಜಯ ಕಲಾ ನಾಟ್ಯ ಸಂಘ ಇಳಕಲ್ಲಿನ ಕಲಾವಿದರಿಗೆ ಧನ್ಯವಾದ ಹೇಳುತ್ತ ಕಾರ್ಯಕ್ರಮವು ತುಸು ತಡವಾಗಿ ಆರಂಭವಾದರೂ ಕೊರೆಯುವ ಚಳಿಯಲ್ಲಿಯೂ ಕೂಡಾ ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ ಎಲ್ಲಾ ಪ್ರೇಕ್ಷಕರಿಗೂ ಧನ್ಯವಾದ ಹೇಳಿದರು.

ಸಭಾ ಕಾರ್ಯಕ್ರಮದ ಬಳಿಕ ಪ್ರದರ್ಶನ ಕಂಡ ಸಂಪತ್ತಿಗೆ ಸವಾಲ್ ನಾಟಕವು ಎರಡು ತಾಸುಗಳ ಕಾಲ ಪ್ರೇಕ್ಷಕರನ್ನು ಸೆಳೆದು ಹಿಡಿದಿಡುವಲ್ಲಿ ಶಕ್ತವಾಯಿತು. ಉತ್ತರ ಕರ್ನಾಟಕದ ಗಂಡು ಮೆಟ್ಟಿನ ಭಾಷೆಯಲ್ಲಿ ಸರಾಗವಾಗಿ ಸಾಗಿದ ನಾಟಕದಲ್ಲಿ ನಟಿಸಿದ ಪ್ರತಿಯೊಬ್ಬ ಕಲಾವಿದರೂ ತಾವು ವೃತ್ತಿಪರ ರಂಗಕಲಾವಿದರೆಂಬುದನ್ನು ಸಾಬೀತುಪಡಿಸಿದರು.

ರಮೇಶ ಮಡಿವಾಳರ, ಶ್ರೀಮತಿ ನಂದಾ ಹೊಸಮನಿ, ಶ್ರೀಮತಿ ಗೀತಾ ಗುಳೇದಗುಡ್ಡ, ವೆಂಕಪ್ಪಾ ಕುಲಕರ್ಣಿ ಪಾತ್ರಧಾರಿ, ಸಾಹುಕಾರ, ಸಾಹುಕಾರನ ಮಗಳು ಇತ್ಯಾದಿಯಾಗಿ ಎಲ್ಲರೂ ಪ್ರೇಕ್ಷಕರ ಮನದಲ್ಲಿ ಸದಾ ನೆಲೆಯೂರುವಂತೆ ಅತ್ಯಂತ ಸಹಜವೆಂಬಂತೆ ನಟಿಸಿದರು.

ನಾಲ್ಕು ತಾಸುಗಳಷ್ಟು ಸುದೀರ್ಘ ನಾಟಕವನ್ನು ಎರಡೇ ತಾಸುಗಳಿಗೆ ಇಳಿಸುವುದು ದೊಡ್ಡ ಸವಾಲಾಗಿದ್ದರೂ ಕಲಾವಿದರು ಕತೆಗೆ ಎಳ್ಳಷ್ಟೂ ನ್ಯೂನತೆ ಉಂಟು ಮಾಡದೇ ಸಮರ್ಥವಾಗಿ ಪ್ರದರ್ಶನ ಮಾಡಿದರು. ನಾಟಕದಲ್ಲಿ ಬಳಸಿದ ಸಂಗೀತವು ಸೂಕ್ತವಾಗಿತ್ತಾದರೂ ಕೆಲವು ಕಡೆ ಸಿನೆಮಾ ಇಫೆಕ್ಟ್ ನೀಡುವ ಮೂಲಕ ವಿಭಿನ್ನತೆಯನ್ನು ತೋರಿತು.

ಕಾರ್ಯಕ್ರಮವನ್ನು ಸಂತೋಷ ಉಪಾಧ್ಯಾಯ ಅವರು ಹಿತಮಿತವಾಗಿ ನಿರ್ವಹಿಸಿದರು.

***ಸಂತೋಷ ಉಪಾಧ್ಯಾಯ***









# ಅಗಲಿದ ಎನ್.ಪಿ. ಭಟ್, ಚಿದಾನಂದ ಮೂರ್ತಿ ಮತ್ತು ಎಂ.ಎಚ್. ಪೂಜಾರಿ ಅವರಿಗೆ ಶ್ರದ್ಧಾಂಜಲಿ



ಇತ್ತೀಚಿಗೆ ನಮ್ಮನ್ನೆಲ್ಲಾ ಅಗಲಿದ ಕನ್ನಡ ಸಾರಸ್ವತ ಲೋಕದ ದಿಗ್ಗಜ, ಮಹಾನ್ ಸಂಶೋಧಕ, ನಾಡೋಜ ಡಾ. ಎಂ. ಚಿದಾನಂದ ಮೂರ್ತಿ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ, ಸಾಹಿತಿ, ಅಪೂರ್ವ ಸಂಘಟನಾಕಾರ, ಸಮರ್ಥ ಆಡಳಿತಗಾರ ದಿ.ಎನ್.ಪಿ ಭಟ್ ಹಾಗೂ ಸಂಘದ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯ ದಿ. ಎಂ.ಎಚ್ ಪೂಜಾರಿಯವರಿಗೆ ದೆಹಲಿ ಕರ್ನಾಟಕ ಸಂಘವು ತನ್ನ ಶ್ರದ್ಧಾ ನಮನಗಳನ್ನು ಅರ್ಪಿಸಿತು.

ಜನವರಿ 12 ರಂದು ಸಂಘದ ಸಭಾಂಗಣದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡ ಹಲವಾರು ಜನರು ಅಗಲಿದ ಈ ಗಣ್ಯರ ಸ್ಮರಣೆಯಲ್ಲಿ ಒಂದು ನಿಮಿಷದ ಮೌನ ಆಚರಿಸಿ, ಭಾವಚಿತ್ರಗಳಿಗೆ ಪುಷ್ಪಗಳನ್ನು ಅರ್ಪಿಸುವ ಮೂಲಕ ತಮ್ಮ ಶ್ರದ್ಧಾಂಜಲಿ ನೀಡಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಡಾ. ಅಹಲ್ಯಾ ಚಿಂತಾಮಣಿ, ನರಸಿಂಹ ಹೆಗಡೆ ಮತ್ತು ವಸಂತ ಶೆಟ್ಟಿ ಬೆಳ್ಳಾರೆಯವರು ಅಗಲಿದ ಗಣ್ಯರೊಂದಿಗಿನ ತಮ್ಮ ಒಡನಾಟಗಳನ್ನು ನೆನಪಿಸಿಕೊಂಡರು ಮತ್ತು ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾರೈಸಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಮಾತನಾಡಿ ಡಾ. ಎಂ. ಚಿದಾನಂದ ಮೂರ್ತಿ ಅವರು ಇತ್ತೀಚೆಗೆ ಕೇಂದ್ರ ಸರ್ಕಾರದ ಪುರಸ್ಕಾರ ಪಡೆಯಲು ಬಂದಾಗ ದೆಹಲಿ ಕರ್ನಾಟಕ ಸಂಘದ ಗೌರವ ಸ್ವೀಕರಿಸಿದ್ದನ್ನು ಸ್ಮರಿಸಿದರು. ಕಾರ್ಯಕ್ರಮದ ಕೊನೆಗೆ ಕಾರ್ಯದರ್ಶಿ ಶ್ರೀ ಸಿ.ಎಂ ನಾಗರಾಜ ಇತ್ತೀಚೆಗೆ ವಂದನಾರ್ಪಣೆ ಮಾಡಿದರು.

***ಸಂತೋಷ ಉಪಾಧ್ಯಾಯ***



**ಪಿ.ಬಿ. ಧುತ್ತರಗಿ ಟ್ರಸ್ಟ್, ಬಾಗಲಕೋಟೆ ಇದರ ಸದಸ್ಯರು ಅಗಲಿದೆ ಮಹನೀಯರಿಗೆ ಪುಷ್ಪನಮನ ಸಲ್ಲಿಸಿದರು**

# ಪೇಜಾವರ ಶ್ರೀಗಳಿಗೆ ನುಡಿ ನಮನ




ಈಚೆಗೆ ಬೃಂದಾವನಸ್ಥರಾದ ಉಡುಪಿಯ ಪೇಜಾವರ ಅಧೋಕ್ಷಜ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ನುಡಿನಮನ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪದಾಧಿಕಾರಿಗಳು ಹಾಗೂ ದೆಹಲಿ ಕನ್ನಡಿಗರು ಆರಂಭದಲ್ಲಿ ಪುಷ್ಪ ನಮನ ಸಲ್ಲಿಸಿದರು.

ದೆಹಲಿಯ ಪೇಜಾವರ ಮಠದ ಧನಂಜಯ ಆಚಾರ್ಯ ಅವರು ಮಾತನಾಡಿ, ಶ್ರೀಗಳು ಪೂರ್ವಾಶ್ರಮದಲ್ಲಿ ಬಾಲ್ಯದಲ್ಲಿ ಒಮ್ಮೆ ಸಮೀಪದ ಕೆರೆಯಲ್ಲಿ ಮುಳುಗುತ್ತಿದ್ದಾಗ ಬ್ರಾಹ್ಮಣೇತರ ವ್ಯಕ್ತಿಯೊಬ್ಬರು ಕೂಗಿ ತಂದೆಯವರನ್ನು ಕರೆದ ಘಟನೆಯನ್ನು ನೆನಪಿಸಿದರು. ಆಗ ಆ ವ್ಯಕ್ತಿ ಅಸ್ಪೃಶ್ಯತೆಯ ಕಾರಣ ಸ್ವತಃ ಧುಮುಕಿ ಶ್ರೀಗಳನ್ನು ರಕ್ಷಿಸಲಾಗಲಿಲ್ಲ. ಶ್ರೀಗಳ ತಂದೆಯವರು ಈಜಿ ದಡ ಸೇರಿಸಿದರು. ಅಂದಿನಿಂದಲೇ ಶ್ರೀಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಯಸಿದ್ದರು. ಅಲ್ಲದೆ ಅವರನ್ನು ರಕ್ಷಿಸಲು ಕಾರಣರಾದ ವ್ಯಕ್ತಿಯ ಕುಟುಂಬಕ್ಕೂ ನೆರವಾಗಿದ್ದರು ಎಂದು ಶ್ರೀಗಳ ಉಪಕಾರ ಸ್ಮರಣೆಯನ್ನು ನೆನೆದರು.

ಶ್ರೀ ಪ್ರಭಂಜನ ಆಚಾರ್ಯ ಮತ್ತು ಸುಶಮೀಂದ್ರ ಆಚಾರ್ಯರು ಶ್ರೀಗಳ ಮಾನವೀಯ ಗುಣಗಳನ್ನು ನೆನೆದರು.

ಸಂಘದ ಮಾಜಿ ಕೋಶಾಧಿಕಾರಿ ಎಂ.ವಿ. ವೆಂಕಟೇಶ್ ಅವರು ತಮ್ಮ ಕುಟುಂಬದ ಜೊತೆಗೆ ಶ್ರೀಗಳು ಹೊಂದಿದ್ದ ನಿಕಟ ಸಂಬಂಧವನ್ನು ಸ್ಮರಿಸಿದರು. ತಮ್ಮ ಪುತ್ರನಿಗೆ 'ಅಧೋಕ್ಷಜ' ಎಂದು ನಾಮಕರಣ ಮಾಡಿದ್ದ ಶ್ರೀಗಳು ಪುತ್ರನ 'ಬ್ರಹ್ಮೋಪದೇಶ' ಸಮಾರಂಭಕ್ಕೂ ಹಾಜರಾಗಿ ಹರಿಸಿದ ಘಟನೆಯನ್ನು ಹೃದಯಸ್ಪರ್ಶಿಯಾಗಿ ಸ್ಮರಿಸಿದರು.

ಸಂಘದ ಮಾಜಿ ಕೋಶಾಧಿಕಾರಿ ಕೆ.ಎಸ್.ಜಿ. ಶೆಟ್ಟಿಯವರು ತಮ್ಮ ಮನೆಯಿಂದ ಪೇಜಾವರ ಶ್ರೀಗಳ ಎರಡನೇ ಪರ್ಯಾಯಕ್ಕೆ ಹೊರೆ ಕಾಣಿಕೆ ನೀಡಿದ ಸಂದರ್ಭವನ್ನು ನೆನೆದರು. ಶ್ರೀಗಳು ಎಲ್ಲ ಸಮುದಾಯದ ವಿಶ್ವಾಸವನ್ನು ಗಳಿಸಿದ್ದರು ಎಂದು ತಿಳಿಸಿದರು.

ದೆಹಲಿ ತುಳುಸಿರಿಯ ಉಪಾಧ್ಯಕ್ಷ ಶ್ರೀಹರಿಯವರು ತಮ್ಮ ತಂದೆ ಮಠದ ಭೋಜನ ಶಾಲೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದ ದಿನಗಳನ್ನು ಸ್ಮರಿಸಿದರು ಮತ್ತು ಶ್ರೀಗಳ ಜತೆಗಿನ ನಿಕಟ ಸಂಬಂಧವನ್ನು ನೆನೆದರು.

ಶ್ರೀಮತಿ ಮಾಲಿನಿ ಪ್ರಹ್ಲಾದ್, ಕಲಾವಿದ ಸುಧೀರ್ ಫಡ್ನೀಸ್, ಕಲಾವಿದ ಧೀರೇಂದ್ರ ರಾವ್, ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಎಂ.ಎಸ್. ಶಶಿಕುಮಾರ್ ಮೊದಲಾದವರು ಶ್ರೀಗಳನ್ನು ಕಂಡು ಆಶೀರ್ವಾದ ಪಡೆದ ಸಂದರ್ಭಗಳನ್ನು ಸ್ಮರಿಸಿಕೊಂಡರು.

ಎರಡು ದಶಕಗಳ ಹಿಂದೆ ಪೇಜಾವರ ಮಠದ ಆಶ್ರಯದಲ್ಲಿ ನಡೆದ ನಿರೂಪಣಾ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದು ಸ್ಮರಣೀಯ ಮತ್ತು ನನ್ನ ಸುಯೋಗ ಎಂದು ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಸ್ಮರಿಸಿಕೊಂಡರು. ಉಡುಪಿ ಪ್ರದೇಶದಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಿಸುವಲ್ಲಿ ಪೇಜಾವರ ಶ್ರೀಗಳ ಪ್ರೋತ್ಸಾಹವಿತ್ತು ಎಂದು ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಶಿಲಾನ್ಯಾಸ ಸಮಾರಂಭದಲ್ಲಿ ಪೇಜಾವರ ಶ್ರೀಗಳು ಭಾಗವಹಿಸಿದ್ದರು. ಅಂದು ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರ ಸ್ವಾಮೀಜಿ ಹಾಗೂ ಸುತ್ತೂರ ಮಠದ ಶ್ರೀ ಶಿವರಾತ್ರಿಕೇಶ್ವರ ಸ್ವಾಮಿಗಳೊಂದಿಗೆ ಪೇಜಾವರ ಉಪಸ್ಥಿತರಿದ್ದು ಆಶೀರ್ವಚನ ನೀಡಿದ್ದ ಸಂದರ್ಭವನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಿನಯಪೂರ್ವಕವಾಗಿ ಸ್ಮರಿಸಿಕೊಂಡರು.



# ದೆಹಲಿ ಕರ್ನಾಟಕ ಸಂಘದಲ್ಲಿ ಗಣರಾಜ್ಯೋತ್ಸವ



ಪ್ರತಿ ವರ್ಷದಂತೆ ಈ ವರ್ಷವೂ ದಿನಾಂಕ 26.01.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಗಣರಾಜ್ಯೋತ್ಸವದ 71ನೇ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಭಾರತದ ತ್ರಿವರ್ಣ ಧ್ವಜಾರೋಹಣ ನೆರವೇರಿಸಿದರು.

ಮುಖ್ಯ ಅತಿಥಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಎನ್.ಪಿ. ಚಂದ್ರಶೇಖರ್ ಅವರು ಮಾತನಾಡಿ ಈ 71ನೇ ಗಣರಾಜ್ಯೋತ್ಸವ ದಿನಾಚರಣೆ ಭಾರತೀಯರಾದ ನಮಗೆಲ್ಲಾ ಅದರಲ್ಲೂ ಕನ್ನಡಿಗರೆಲ್ಲರಿಗೂ ಎರಡು ಮುಖ್ಯಕಾರಣಗಳಾಗಿ ಅತ್ಯಂತ ಹೆಮ್ಮೆಪಡಬೇಕಾದ ಸಂದರ್ಭವನ್ನು ಒದಗಿಸಿದೆ. ಮೊದಲನೆಯದು ಈ ವರ್ಷ ರಾಷ್ಟ್ರ ರಾಜಧಾನಿಯ ರಾಜಪಥ್‌ನಲ್ಲಿ ನಡೆಯುವ ಗಣರಾಜ್ಯೋತ್ಸವದ ಸ್ತಬ್ಧಚಿತ್ರಗಳ ಮೆರವಣಿಗೆಯಲ್ಲಿ ಕರ್ನಾಟಕದ 'ಅನುಭವ ಮಂಟಪ'ವನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ. ನಮಗೆಲ್ಲ ತಿಳಿದಿರುವಂತೆ ಕ್ರಿ.ಶ. 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ವಚನ ಚಳುವಳಿಯಲ್ಲಿ ಮೊತ್ತಮೊದಲ ಬಾರಿಗೆ ಸಮಾಜದಲ್ಲಿದ್ದ ಅಸಮಾನತೆ, ಅಸ್ಪೃಶ್ಯತೆ ಮತ್ತು ಮೂಢನಂಬಿಕೆಗಳನ್ನು ತೊರೆದು ದುಡಿಯುವ ವರ್ಗದ ಎಲ್ಲ ಜನರನ್ನು ಒಂದು ವೇದಿಕೆಯಡಿಯಲ್ಲಿ ತರುವ ಕ್ರಾಂತಿಕಾರಕ ಘಟನೆ ಆರಂಭವಾಗಿತ್ತು. ಈ ರೀತಿ 900 ವರ್ಷಗಳ ಹಿಂದೆಯೇ ಎಲ್ಲ ಜಾತಿ, ವರ್ಗಗಳ ಮಹಿಳೆಯರು, ಪುರುಷರು ಮೇಲು ಕೀಳು ಎಂಬ ಭಾವನೆಗಳನ್ನು ಬದಿಗೊತ್ತಿ ದಲಿತರು, ಹಿಂದುಳಿದವರು ಎಲ್ಲರೂ ಒಟ್ಟಿಗೆ ಕುಳಿತು ತಮ್ಮ ತಮ್ಮ ಸ್ವಂತ ಅನುಭವಗಳನ್ನು ಪರಸ್ಪರ ಚರ್ಚಿಸಿ ಅವುಗಳನ್ನು ವಚನಗಳ ರೂಪದಲ್ಲಿ ರಚಿಸುವುದಕ್ಕೆ ನೆರವಾಗಲು ಅನುಭವ ಮಂಟಪವನ್ನು ಬಸವಣ್ಣನವರು ಸ್ಥಾಪನೆ ಮಾಡಿದ್ದರು. ಇಂತಹ ಒಂದು ಸಮಾಜೋ–ಧಾರ್ಮಿಕ ಕ್ರಾಂತಿ ನಡೆದದ್ದು ಕ್ರಿ.ಶ. 1132 ರಿಂದ 1165 ರ ನಡುವಿನ ಕಾಲಘಟ್ಟದಲ್ಲಿ. ಜಗತ್ತಿನ ಎಲ್ಲಾ ದೇಶಗಳ ಸಂವಿಧಾನಗಳ ತಾಯಿ ಎಂದು ಪರಿಗಣಿತವಾಗಿರುವ 'ಮ್ಯಾಗ್ನಾಕಾರ್ಟ' ಅಸ್ತಿತ್ವಕ್ಕೆ ಬಂದುದ್ದು ಕ್ರಿ.ಶ. 1215. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಇಂಗ್ಲೆಂಡಿನಲ್ಲಿ 'ಮ್ಯಾಗ್ನಾಕಾರ್ಟ' ಅಸ್ತಿತ್ವಕ್ಕೆ ಬರುವ 50 ವರ್ಷಗಳ ಮೊದಲೇ ಕರ್ನಾಟಕದ ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಬಸವಣ್ಣನವರು ಜಗತ್ತಿನ ಮೊಟ್ಟ ಮೊದಲ ಸಮಾಜೋ–ಧಾರ್ಮಿಕ ಸಂಸತ್ತು ಎಂದು ಪರಿಗಣಿತವಾಗಿರುವ ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಅದು ಸಮಾಜದ ಎಲ್ಲ ವರ್ಗದ ಸ್ತ್ರೀ ಪುರುಷರಿಗೂ ಸಮಾನತೆ, ಸಹಬಾಳ್ವೆ, ಸ್ವಾತಂತ್ರ್ಯಗಳನ್ನು ಎತ್ತಿ ಹಿಡಿದಿತ್ತು. ಅದೆಲ್ಲದರ ಜೊತೆಗೆ ಪಂಡಿತರ ಭಾಷೆಯಾಗಿದ್ದ ಸಂಸ್ಕೃತಕ್ಕೆ ಪ್ರತಿಯಾಗಿ ಶ್ರೀ ಸಾಮಾನ್ಯರ ಭಾಷೆಯಾಗಿದ್ದ ಕನ್ನಡವನ್ನು ಸಾಹಿತ್ಯದ ಸಿಂಹಾಸನದಲ್ಲಿ ವಿರಾಜಮಾನಗೊಳಿಸಿದರು. ರಾಜಪೋಷಿತ ಸಾಹಿತ್ಯದ ಜಾಗದಲ್ಲಿ ಪ್ರಜಾ ಪೋಷಿತ ಸಾಹಿತ್ಯವನ್ನು ಬೆಳೆಸಿದವರು ವಚನಕಾರರು. ಇಂತಹ ವಚನ ಚಳವಳಿಯ ನೇತೃತ್ವ ವಹಿಸಿದ್ದ ಬಸವಣ್ಣನವರ ಈ ಚಿಂತನೆ ಕರ್ನಾಟಕದಲ್ಲಿ ಮೊಳಕೆಯೊಡೆಯುತ್ತಿದ್ದ ಸಂದರ್ಭದಲ್ಲಿ ಜಗತ್ತಿನ ಇತರ ದೇಶಗಳು ಅಜ್ಞಾನ ಮತ್ತು ಅಂಧಕಾರದಲ್ಲಿ ಮುಳುಗಿದ್ದವು. ಹಾಗಾಗಿ ಜಗತ್ತಿಗೆ ಮಾದರಿಯಾಗುವಂತಹ ಅನುಭವ ಮಂಟಪದ ಸ್ಥಾಪನೆ ಮಾಡಿದ್ದಲ್ಲದೆ ಸಮಾಜದ ಕೆಳಸ್ತರದಿಂದ ಬಂದ ಶ್ರೇಷ್ಠ ಅನುಭಾವೀ ವಚನಕಾರರಾದ ಅಲ್ಲಮಪ್ರಭು ಅವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದ್ದುದು ಗಮನಾರ್ಹ ಸಂಗತಿ.

ಇಂತಹ ಕ್ರಾಂತಿಕಾರಕ ಚಳವಳಿಯ ಸಾಕ್ಷಿಯಾಗಿರುವ ಅನುಭವ ಮಂಟಪದ ಸ್ತಬ್ಧಚಿತ್ರವನ್ನು ರಾಷ್ಟ್ರ ರಾಜಧಾನಿ ನವದೆಹಲಿಯ ರಾಜಪಥ್‌ನಲ್ಲಿ ಮೆರವಣಿಗೆಯಲ್ಲಿ ಪ್ರದರ್ಶಿಸುವ ಮೂಲಕ ಜಗತ್ತಿನ ಗಮನವನ್ನು ಭಾರತದೆಡೆಗೆ ಮಾತ್ರವಲ್ಲ ಭಾರತ ಜನನಿಯ ತನುಜಾತೆಯಾಗಿರುವ ಕನ್ನಡಾಂಬೆಯ ನೆಲದ ಕಡೆಗೂ ಸೆಳೆಯುವಂತೆ ಮಾಡುವಲ್ಲಿ ಈ ವರ್ಷದ ಗಣರಾಜ್ಯೋತ್ಸವ ಆಚರಣೆ ಯಶಸ್ವಿಯಾಗಿದೆ. ಇದು ಕನ್ನಡಿಗರ ಹೆಮ್ಮೆ.


ಎರಡನೆಯದು, ಪ್ರತಿಯೊಬ್ಬ ಭಾರತೀಯನ ಆತ್ಮ ಗೌರವವನ್ನು ಎತ್ತಿ ಹಿಡಿಯುವ 1950 ಜನವರಿ 26 ರಂದು ಜಾರಿಗೊಂಡ ನಮ್ಮ ಹೆಮ್ಮೆಯ ಭಾರತದ ಸಂವಿಧಾನದ ಕರಡನ್ನು ರೂಪಿಸುವಲ್ಲಿ ಕರ್ನಾಟಕದ ಬೆನಗಲ್ ನರಸಿಂಹರಾಯರು ವಹಿಸಿದ ಪಾತ್ರ ಅಸಾಧಾರಣವಾದದ್ದು. ಘನ ವಿದ್ವತ್ತಿಗೆ ಹೆಸರಾಗಿದ್ದ ಅವರು ಸುಮಾರು 60 ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ಅದರ ಜೊತೆಗೆ ನಮ್ಮ ದೇಶದ ವೇದ, ಉತ್ತಮ ಅಂಶಗಳನ್ನು ಕಲೆ ಹಾಕಿ, ನಮ್ಮ ಸಂವಿಧಾನದ ಕರಡನ್ನು ರೂಪಿಸಿದರು ಎಂಬುದು ಅತ್ಯಂತ ಕುತೂಹಲದ ಸಂಗತಿ. ಈ ರೀತಿ ತಾವು ರಚಿಸಿದ ಕರಡನ್ನು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಮರ್ಪಿಸಿ, ಭಾರತ ಸಂವಿಧಾನ ರಚನೆಯಲ್ಲಿ ಗಮನಾರ್ಹ ಕೊಡುಗೆ ನೀಡಿದ್ದರು ಎಂಬ ಸಂಗತಿ ಕನ್ನಡಿಗರಾದ ನಮಗೆಲ್ಲರಿಗೂ ಅತೀವ ಸಂತೋಷವನ್ನು ತರುವಂತಹದು. ಈ ದೃಷ್ಟಿಕೋನದಿಂದ ಆಧುನಿಕ ಭಾರತದ ಸಂವಿಧಾನದ ಕರಡು ರಚನೆ ಮತ್ತು 900 ವರ್ಷಗಳ ಹಿಂದೆಯೇ ಸಮಾಜೋ–ಧಾರ್ಮಿಕ ಸಂವಿಧಾನವಾದ ಅನುಭವ ಮಂಟಪದ ಸ್ಥಾಪನೆ ಎರಡರಲ್ಲೂ ಕನ್ನಡ ಮತ್ತು ಕರ್ನಾಟಕದ ಕೊಡುಗೆ ಅಪಾರವಾಗಿದೆ ಎಂಬುದು ಕನ್ನಡಿಗರಾದ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ ಎಂದು ಹೇಳಿದರು.

ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ನಾವೆಲ್ಲರೂ ಸಂವಿಧಾನವನ್ನು ಅರ್ಥ ಮಾಡಿಕೊಂಡು ಕಾನೂನು ಮತ್ತು ನಿಯಮಗಳಿಗೆ ಅನುಗುಣವಾಗಿ ಉತ್ತಮ ನಾಗರಿಕರಾಗಿ ಬಾಳೋಣ ಎಂಬ ಸಂದೇಶ ನೀಡಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

**ಶಿವಪ್ಪ ಎಂ.**

# ನವದೆಹಲಿಯ ರಾಜಪಥದಲ್ಲಿ ಅನುಭವ ಮಂಟಪ ಸ್ತಬ್ಧಚಿತ್ರ




ನವದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಈ ಬಾರಿ ಕರ್ನಾಟಕದ 'ಅನುಭವ ಮಂಟಪ' ವಿಷಯಾಧಾರಿತ ಸ್ತಬ್ಧಚಿತ್ರ ನೋಡುಗರ ಗಮನ ಸೆಳೆಯುವ ಮೂಲಕ, 12ನೇ ಶತಮಾನದಲ್ಲೇ ಮಾನವ ಆಧಾರಿತ ಧಾರ್ಮಿಕ ಸಂಸತ್ ರಚಿಸಿದ ಸಮಾಜಿಕ ಹರಿಕಾರ ಬಸವೇಶ್ವರರ ತತ್ವ-ಆದರ್ಶಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅರಿವು ಮೂಡಿಸಲು ಸ್ತಬ್ಧಚಿತ್ರ ಯಶಸ್ವಿಯಾಯಿತು.

ಸ್ತಬ್ಧಚಿತ್ರದ ಬಗ್ಗೆ ವಿವರಣೆ ನೀಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಎಸ್.ಎನ್. ಸಿದ್ದರಾಮಪ್ಪ ಅವರು, ಜಾತಿ, ಮತ, ಲಿಂಗ ಮತ್ತು ಧರ್ಮ ಬೇಧಗಳ ಮೇಲಾಟದ ಸಂದರ್ಭದಲ್ಲಿ ನಲುಗಿದ ಸಮಾಜದ ಪರಿವರ್ತನೆಗಾಗಿ ಸಂತ ಬಸವೇಶ್ವರರು ಹನ್ನೆರಡನೇ ಶತಮಾನದಲ್ಲಿ ನಡೆಸಿದ ಕರ್ನಾಟಕದ ಸಾಮಾಜಿಕ ಕ್ರಾಂತಿಯ ಪ್ರತಿರೂಪ 'ಅನುಭವ ಮಂಟಪ, ಸ್ತಬ್ಧಚಿತ್ರದ ಮುಂಭಾಗದ ಪೀಠದಲ್ಲಿ 'ಕಾಯಕವೇ ಕೈಲಾಸ' ಪರಿಕಲ್ಪನೆಗೆ ರೂಪಕೊಟ್ಟ ಮಹಾ ಸಂತ ಬಸವೇಶ್ವರರ ಪ್ರತಿಕೃತಿ. ಅದರ ಅಕ್ಕಪಕ್ಕ ಕಾಯಕ ಕಲ್ಪನೆಯ ಅರ್ಥ ವಿಸ್ತರಿಸಿದ ಅನುಭಾವಿಗಳು ತಮ್ಮ ಕಾಯಕದಲ್ಲಿ ಮಗ್ನರಾದ ಶಿಲ್ಪಗಳು. ಅನುಭವ ಮಂಟಪದ ಅರ್ಥ ವಿಸ್ತರಿಸಲು ಅದರ ಕೆಳಪೀಠದಲ್ಲಿ ಅಕ್ಕನಾಗಮ್ಮ, ಶರಣೆ ಸತ್ಯಕ್ಕ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಕಲ್ಯಾಣಮ್ಮ, ಹರಳಯ್ಯ, ಕುಂಬಾರ ಗುಂಡಣ್ಣ, ಸಿದ್ಧರಾಮೇಶ್ವರ, ಬಾಚಿ ಕಾಯಕದ ಬಸಪ್ಪ ಅವರ ಪ್ರತಿಕೃತಿಗಳನ್ನು ನಿರ್ಮಿಸಲಾಗಿತ್ತು.

ಅದರ ಹಿಂಭಾಗದ ಪೀಠದಲ್ಲಿ ಅನುಭವ ಮಂಟಪದ ಕಲ್ಪನೆಯನ್ನು ಕಟ್ಟಲು ನಾಲ್ಕು ಕಂಬಗಳ ಮೇಲೆ ರೂಪಿಸಿದ ಮಂಟಪ.



ಅದರೊಳಗೆ ಇತರ ಜ್ಞಾನಿಗಳ ನಡುವೆ ಶರಣೆ ಅಕ್ಕಮಹಾದೇವಿ ಹಾಗೂ ಅಲ್ಲಮರ ನಡುವೆ ನಡೆದ ಚರ್ಚೆಯ ಸನ್ನಿವೇಶ. ಮಂಟಪದ ಮೇಲ್ಭಾಗದ ತೊಲೆಯ ಮೇಲೆ ಅನುಭವ ಮಂಟಪದ ಕಾಲ-ಸ್ಥಳದ ಅಕ್ಷರರೂಪ. ಕೆಳಭಾಗದಲ್ಲಿ ಆ ಕಾಲಘಟ್ಟದ ಜಾನಪದ ಕಲೆಗಳ ಅನಾವರಣ. ಜೊತೆಗೆ ಅನುಭವ ಮಂಟಪದ ಅನುಭವವನ್ನು ಮತ್ತಷ್ಟು ಹಿಗ್ಗಿಸುವ ಹಿನ್ನೆಲೆಯಲ್ಲಿ ಲಯಬದ್ಧವಾಗಿ ಹರಿದು ಬರುವ ವಚನಗಾಯನ ಕೇಳುಗರ ಮನಸೂರೆಗೊಂಡಿತು.

ಸ್ತಬ್ಧಚಿತ್ರದೊಂದಿಗೆ ಸಾಣ್ಣೇಹಳ್ಳಿ ಶಿವಸಂಚಾರ ನಾಟಕ ತಂಡದ 27 ಕಲಾವಿದರು ವಿವಿಧ ಶರಣರ ಪಾತ್ರ ಮತ್ತು ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆಯಲು ಯಶಸ್ವಿಯಾದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ 2010 ರಿಂದ ಇಲ್ಲಿಯವರೆಗೆ ಅಂದರೆ ಕಳೆದ 11 ವರ್ಷಗಳಿಂದ ಸತತವಾಗಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸ್ತಬ್ಧಚಿತ್ರದೊಂದಿಗೆ ಭಾಗವಹಿಸುತ್ತಿದೆ. ರಾಜ್ಯ ಸರ್ಕಾರ ಹಾಗೂ ಇಲಾಖೆಗೆ ಇದು ರಾಷ್ಟ್ರಮಟ್ಟದಲ್ಲಿ ಹೆಮ್ಮೆ ತರುವ ಸಂಗತಿಯಾಗಿದೆ. ಗಣರಾಜ್ಯೋತ್ಸವ ಪರೇಡ್‌ನಲ್ಲಿ ಇಲಾಖೆಗೆ ಈವರೆಗೆ 5 ಬಾರಿ ಪ್ರಶಸ್ತಿ ಗಳಿಸಿದ್ದು, ಒಂದು ಬಾರಿ ಪ್ರಥಮ, 2 ಬಾರಿ ದ್ವಿತೀಯ ಹಾಗೂ 2 ಬಾರಿ ತೃತೀಯ ಪ್ರಶಸ್ತಿ ತನ್ನದಾಗಿಸಿಕೊಂಡಿದೆ ಎಂದು ವಿವರಿಸಿದರು.

ಸ್ತಬ್ಧಚಿತ್ರದ ಪರಿಕಲ್ಪನೆ ಮತ್ತು ವಿನ್ಯಾಸವನ್ನು ಖ್ಯಾತ ಕಲಾವಿದ ಶಶಿಧರ ಅಡಪ ನೇತೃತ್ವದಲ್ಲಿ 'ಪ್ರತಿರೂಪಿ ತಂಡ' ನಿರ್ವಹಿಸಿದರೆ, ವಚನ ಸಂಗೀತವನ್ನು ಸಂಗೀತಗಾರ 'ಪ್ರವೀಣ್ ಗೋಡ್ಖಿಂಡಿ' ರಚಿಸಿದ್ದರು. ಸ್ತಬ್ಧಚಿತ್ರದ ಮೇಲ್ ಉಸ್ತುವಾರಿಯನ್ನು ಜಂಟಿ ನಿರ್ದೇಶಕ ಬಸವರಾಜ್ ಕಂಬಿ, ಸ್ಥಳೀಯ ನಿರ್ವಹಣೆಯನ್ನು ನವದೆಹಲಿಯ ಕರ್ನಾಟಕ ವಾರ್ತಾಕೇಂದ್ರದ ಪ್ರಭಾರಿ ಉಪ ನಿರ್ದೇಶಕ ಡಾ. ಮೈಸೂರು ಗಿರೀಶ್ ಮತ್ತು ವಾರ್ತಾ ಸಹಾಯಕ ಅಮರೇಶ್ ದೊಡ್ಡಮನಿ ನಿರ್ವಹಿಸಿದರು.

***ವರದಿ : ಕರ್ನಾಟಕ ವಾರ್ತಾ ಕೇಂದ್ರ***

# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ



**ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಬ್ಯಾಟ್ ಮಾಡಿ ಚೆಂಡನ್ನು ಹೊಡೆಯುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು.**

ದೆಹಲಿ ಕರ್ನಾಟಕ ಸಂಘದ ವತಿಯಿಂದ ನಡೆಯುವ ವಾರ್ಷಿಕ ಆಟೋಟ ಸ್ಪರ್ಧೆಗಳಲ್ಲಿ ಒಂದಾದ 2019–20ನೇ ಸಾಲಿನ ಕ್ರಿಕೆಟ್ ಪಂದ್ಯಾವಳಿಯನ್ನು 12.01.2020 ಮತ್ತು 19.01.2020ರಂದು ದೆಹಲಿಯ ತಾಲ್ಕತೋರ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ದೆಹಲಿ ತುಳುಸಿರಿ, ಜೆ.ಎಸ್.ಎಸ್.–ಬಿ, ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್, ಕೆಬಿಎಲ್ ಸೂಪರ್ ಕಿಂಗ್ಸ್, ಕನ್ನಡ ಸಿರಿ, ಬೆಳ್ಳಿಯಪ್ಪಾಸ್ ಗ್ರೂಪ್, ಕರ್ನಾಟಕ ಭವನ ಸ್ಟಾರ್ ಕ್ರಿಕೆಟ್, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ಜೆ.ಎಸ್.ಎಸ್.–ಎ ಮತ್ತು ಗೆಳೆಯರ ಬಳಗ ಸೇರಿದಂತೆ ಒಟ್ಟು ಹತ್ತು ತಂಡಗಳು ಭಾಗವಹಿಸಿದವು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರನ್ನು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗೂ ಕಾರ್ಯಕಾರಿ ಸಮಿತಿಯವರ ಮತ್ತು ಕ್ರೀಡಾ ಸಮಿತಿಯವರ ಸಮ್ಮುಖದಲ್ಲಿ ಕ್ರೀಡಾ ಸಮಿತಿಯ ಸಂಚಾಲಕರಾದ ಸಂತೋಷ ಜೆ. ಅವರು ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿದರು. ಡಾ. ವೆಂಕಟಾಚಲ ಹೆಗಡೆ ಅವರು ಬ್ಯಾಟ್ ಮಾಡಿ ಚೆಂಡನ್ನು ಹೊಡೆಯುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಖಜಾಂಚಿ ಶ್ರೀಮತಿ ಆಶಾಲತಾ, ಕ್ರೀಡಾ ಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕ ಸಂತೋಷ ಜೆ., ಜಂಟಿ ಕಾರ್ಯದರ್ಶಿಗಳಾದ ರಾಧಾಕೃಷ್ಣ ಮತ್ತು ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯ ಶಿವಪ್ಪ ಎಂ., ಎನ್.ಆರ್. ಶ್ರೀನಾಥ್, ಶ್ರೀಮತಿ ಶೋಭಾ ಗೌಡ, ಆರ್. ರೇಣುಕುಮಾರ್, ಟಿ.ಎಂ. ಮೈಲಾರಪ್ಪ ಮೊದಲಾದವರು ಉಪಸ್ಥಿತರಿದ್ದು ಪಂದ್ಯಾವಳಿಯ ಯಶಸ್ಸಿಗೆ ಸಹಕರಿಸಿದರು.

ದೆಹಲಿ ತುಳುಸಿರಿ ಮತ್ತು ಜೆ.ಎಸ್.ಎಸ್.–ಬಿ ತಂಡಗಳ ನಡುವೆ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ದೆಹಲಿ ತುಳುಸಿರಿ ತಂಡವು ಟಾಸ್ ಗೆದ್ದು ತಂಡವು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜೆ.ಎಸ್.ಎಸ್.–ಬಿ ತಂಡವು ದೆಹಲಿ ತುಳುಸಿರಿ ತಂಡಕ್ಕೆ ಜಯಗಳಿಸಲು 46ರನ್‌ಗಳ ಗುರಿಯನ್ನು ನೀಡಿತು. ದೆಹಲಿ ತುಳುಸಿರಿ ತಂಡವು 6ವಿಕೆಟ್‌ಗಳಿಂದ ಜಯ ಸಾಧಿಸಿತು. ದೆಹಲಿ ತುಳುಸಿರಿ ತಂಡದ ಮಂಜೀಶ್ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಮತ್ತು ಕೆ.ಬಿ.ಎಲ್. ಸೂಪರ್ ಕಿಂಗ್ಸ್ ತಂಡಗಳ ನಡುವೆ ನಡೆದ ಎರಡನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು ಕೆ.ಬಿ.ಎಲ್. ಸೂಪರ್ ಕಿಂಗ್ಸ್ ತಂಡಕ್ಕೆ 81ರನ್‌ಗಳ ಗುರಿಯನ್ನು ನೀಡಿತು. ಕೆ.ಬಿ.ಎಲ್. ತಂಡವು ಈ ಮೊತ್ತವನ್ನು ಬೆನ್ನಟ್ಟುವಲ್ಲಿ ವಿಫಲವಾಯಿತು. ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು 28 ರನ್‌ಗಳಿಂದ ಜಯ ಸಾಧಿಸಿತು. ಗುರ್‌ಗಾಂವ್ ತಂಡದಿಂದ ಅತ್ಯಧಿಕ ರನ್ ಗಳಿಸಿದ ಪೃಥ್ವಿ ಅವರು ಪಂದ್ಯ ಪುರುಷೋತ್ತಮರಾದರು.

ಕನ್ನಡ ಸಿರಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡುವೆ ನಡೆದ ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು ಕನ್ನಡ ಸಿರಿ ತಂಡಕ್ಕೆ 115ರನ್‌ಗಳ ಗುರಿಯನ್ನು ನೀಡಿತು. ಕನ್ನಡ ಸಿರಿ ತಂಡವು ಈ ಗುರಿಯನ್ನು ಮುಟ್ಟುವಲ್ಲಿ ವಿಫಲವಾಯಿತು. 33 ಎಸೆತಗಳಲ್ಲಿ 53 ರನ್ ಪಡೆದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡದ ಚಂಗಾ ರೆಡ್ಡಿ ಅವರು ಪಂದ್ಯ ಪುರುಷೋತ್ತಮರಾದರು.

ಕರ್ನಾಟಕ ಭವನ ಸ್ಟಾರ್ ಕ್ರಿಕೆಟ್ ಮತ್ತು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡಗಳ ನಡುವೆ ನಡೆದ ನಾಲ್ಕನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಭವನ ತಂಡವು 12 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 77ರನ್‌ಗಳ ಗುರಿಯನ್ನು ನಾಡಪ್ರಭು ಕೆಂಪೇಗೌಡ



**ಉದ್ಘಾಟನಾ ಪಂದ್ಯದಲ್ಲಿ ದೆಹಲಿ ತುಳುಸಿರಿ (ಎಡಬದಿ) ಮತ್ತು ಜೆ.ಎಸ್.ಎಸ್.–ಬಿ,(ಬಲಬದಿ) ತಂಡಗಳು**

ಫೌಂಡೇಶನ್ ತಂಡಕ್ಕೆ ನೀಡಿತು. ಕೆಂಪೇಗೌಡ ತಂಡವು ಎಂಟು ವಿಕೆಟ್‌ಗಳಿಂದ ಜಯ ಸಾಧಿಸಿತು. ತಂಡದ ನಾಯಕ ಕೆ.ಎಸ್. ಮೂರ್ತಿ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮ ರೆನಿಸಿಕೊಂಡರು.

ಜೆ.ಎಸ್.ಎಸ್.-ಎ ತಂಡ ಮತ್ತು ಗೆಳೆಯರ ಬಳಗ ತಂಡಗಳ ನಡುವೆ ನಡೆದ ಐದನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜೆ.ಎಸ್.ಎಸ್.-ಎ ತಂಡವು ಗೆಳೆಯರ ಬಳಗ ತಂಡಕ್ಕೆ 72 ರನ್‌ಗಳ ಗುರಿಯನ್ನು ನೀಡಿತು. ಗೆಳೆಯರ ಬಳಗ ತಂಡವು ಈ ಗುರಿಯನ್ನು ಬೆನ್ನಟ್ಟುವಲ್ಲಿ ವಿಫಲವಾಯಿತು. ಜೆ.ಎಸ್.ಎಸ್.-ಎ ತಂಡದ ನವೀನ್ ಅವರ ಉತ್ತಮ ಬ್ಯಾಟಿಂಗ್ ಬೌಲಿಂಗ್ ಪ್ರದರ್ಶನದ ಮೂಲಕ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡುವೆ ನಡೆದ ಆರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಂಪೇಗೌಡ ತಂಡವು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಕ್ಕೆ 23 ರನ್‌ಗಳ ಗುರಿಯನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್ ಯಾವುದೇ ವಿಕೆಟ್‌ಗಳನ್ನು ಕಳೆದುಕೊಳ್ಳದೆ ಈ ಗುರಿಯನ್ನು ಸುಲಭವಾಗಿ ತಲುಪಿತು. ಬೆಳ್ಳಿಯಪ್ಪಾಸ್ ಗ್ರೂಪ್‌ನ ನಾಯಕ ಸಿದ್ದಪ್ಪ ಕೆ.ಸಿ. ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು. ಈ ಮೂಲಕ ಬೆಳ್ಳಿಯಪ್ಪಾಸ್ ಗ್ರೂಪ್ ಸೆಮಿಫೈನಲ್ ಪ್ರವೇಶಿಸಿತು.

ಮೊದಲ ಸೆಮಿಫೈನಲ್ ದೆಹಲಿ ತುಳುಸಿರಿ ಮತ್ತು ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು 12 ಓವರ್‌ಗಳಲ್ಲಿ 10 ವಿಕೆಟ್‌ಗಳ ನಷ್ಟಕ್ಕೆ 57ರನ್‌ಗಳನ್ನು ಗಳಿಸಿತು. ದೆಹಲಿ ತುಳುಸಿರಿ ತಂಡವು 10.4 ಓವರ್‌ಗಳಲ್ಲಿ 3 ವಿಕೆಟ್‌ಗಳನ್ನು ನಷ್ಟಕ್ಕೆ 63ರನ್‌ಗಳನ್ನು ಗಳಿಸಿ



**ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರನ್ನು ಕ್ರೀಡಾ ಸಮಿತಿಯ ಸಂಚಾಲಕ ಸಂತೋಷ ಜೆ. ಅವರು ಹೂಗುಚ್ಛ ನೀಡಿ ಸ್ವಾಗತಿಸುತ್ತಿರುವುದು.**

ಫೈನಲ್ ಪ್ರವೇಶಿಸಿತು. ದೆಹಲಿ ತುಳುಸಿರಿ ತಂಡದ ನಾಯಕ ರಾಘವ ಶರ್ಮಾ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಎರಡನೇ ಸೆಮಿಫೈನಲ್ ಪಂದ್ಯವು ಕಳೆದ ಬಾರಿಯ ರನ್ನರ್ ಅಪ್ ಆದ ಜೆ.ಎಸ್. ಎಸ್-ಎ ತಂಡ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಜೆ.ಎಸ್. ಎಸ್.-ಎ ತಂಡವು 12 ಓವರ್‌ಗಳಲ್ಲಿ 9 ವಿಕೆಟ್‌ಗಳನ ನಷ್ಟಕ್ಕೆ 70ರನ್‌ಗಳನ್ನು ಗಳಿಸಿತು. ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು 9.3 ಓವರ್‌ಗಳಲ್ಲಿ 2 ವಿಕೆಟ್‌ಗಳನ್ನು ಕಳೆದುಕೊಂಡು 73ರನ್‌ಗಳನ್ನು ಗಳಿಸಿ ಫೈನಲ್ ಪ್ರವೇಶಿಸಿತು. ಬೆಳ್ಳಿಯಪ್ಪಾಸ್ ಗ್ರೂಪ್‌ನ ಚೆಂಗಾ ರೆಡ್ಡಿ ಅವರ ಉತ್ತಮ ಪ್ರದರ್ಶನಕ್ಕೆ ಎರಡನೇ ಬಾರಿ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಹದಿನೈದು ಓವರುಗಳ ಫೈನಲ್ ಪಂದ್ಯಾಟವು ದೆಹಲಿ ತುಳುಸಿರಿ ತಂಡ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ಜೊತೆ ನಡೆಯಿತು. ಟಾಸ್ ಗೆದ್ದ ದೆಹಲಿ ತುಳುಸಿರಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು 15 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 88 ರನ್‌ಗಳನ್ನು ಗಳಿಸಿತು. ದೆಹಲಿ ತುಳು ಸಿರಿ, ತಂಡವು 12.5 ಓವರ್‌ಗಳಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು 89 ರನ್‌ಗಳನ್ನು ಗಳಿಸಿ ಮತ್ತೊಮ್ಮೆ ದೆಹಲಿ ಕರ್ನಾಟಕ ಸಂಘದ 2019-20ನೇ ಸಾಲಿನ ಕ್ರಿಕೆಟ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ದೆಹಲಿ ತುಳುಸಿರಿಯ ಮಂಜೀಶ್ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಫೈನಲ್ ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಟ್ರೋಫಿಯನ್ನು ಗೆಲ್ಲುವ ಮೂಲಕ ದೆಹಲಿ ತುಳುಸಿರಿ ತಂಡವು ದೆಹಲಿ ಕರ್ನಾಟಕ ಸಂಘದ ಕ್ರಿಕೆಟ್ ಪಂದ್ಯಾವಳಿ 2019-20ರ ವಿಜೇತರಾಗಿ ಹೊರಹೊಮ್ಮಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಆಟವನ್ನು ಶಿಸ್ತುಬದ್ಧವಾಗಿ ನಡೆಸಲು ಸಹಕರಿಸಿದ ಎಲ್ಲಾ ಕ್ರೀಡಾಪಟುಗಳು ಮತ್ತು ನೆರೆದಿದ್ದ ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡ ಕ್ರೀಡಾಭಿಮಾನಿಗಳಿಗೆ ಹಾಗೂ ಸಂಘದ ಸಿಬ್ಬಂದಿ ವರ್ಗಕ್ಕೆ ಧನ್ಯವಾದ ಹೇಳಿದರು.

***ಸಂತೋಷ ಜೆ.***
***ಕ್ರೀಡಾ ಸಮಿತಿ ಸಂಚಾಲಕ***



**ಜಯಗಳಿಸಿದ ದೆಹಲಿ ತುಳುಸಿರಿ (ಎಡಬದಿ) ಮತ್ತು ರನ್ನರ್ ಅಪ್ ಬೆಳ್ಳಿಯಪ್ಪಾಸ್ ಗ್ರೂಪ್ (ಬಲಬದಿ) ತಂಡಗಳು**

# ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ದೆಹಲಿ ಒಕ್ಕಲಿಗ ಗೌಡ ಸಂಘದ ಸಂಕ್ರಾಂತಿ ಮಿಲನ






**ಡಾ. ವಿ.ಆರ್. ಗುಡ್ಡೇಗೌಡ ಮತ್ತು ಶ್ರೀ ಎಸ್.ಸಿ. ಹೇಮಲತ ದಂಪತಿಗಳನ್ನು ಹಾಗೂ ಗುರುದೇವ್ ದಂಪತಿಗಳನ್ನು ಅಭಿನಂದಿಸಲಾಯಿತು**

ದೆಹಲಿ ಒಕ್ಕಲಿಗ ಗೌಡ ಸಂಘವು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಸಂಭ್ರಮದ 'ಸಂಕ್ರಾಂತಿ ಮಿಲನ' ಕಾರ್ಯಕ್ರಮ ಆಯೋಜಿಸಿತ್ತು ದಿನಾಂಕ 19.01.2020ರ ಭಾನುವಾರ ಮುಸ್ಸಂಜೆಯಲ್ಲಿ ದೆಹಲಿ ಕರ್ನಾಟಕ ಸಂಘದ ಆವರಣ ಮತ್ತು ಸಭಾಂಗಣ ನಿಜಕ್ಕೂ ಸಂಕ್ರಾಂತಿ ಜಾತ್ರೆಯ ಸ್ವರೂಪವಾಗಿ ಕಂಗೊಳಿಸುತಿತ್ತು. ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾಗಿರುವ ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾ ಸ್ವಾಮೀಜಿಗಳ ಆಶೀರ್ವಾದ ಮತ್ತು ಶ್ರೀ ಆದಿಚುಂಚನಗಿರಿ ಶಾಖಾ ಮಠ ನವದೆಹಲಿಯ ಕಾರ್ಯದರ್ಶಿ ಪೂಜ್ಯ ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷ ಅನಂತರಾಮ ಅರಳಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಜರಗಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರ ಘನ ಉಪಸ್ಥಿತಿಯಲ್ಲಿ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ದೆಹಲಿ ಒಕ್ಕಲಿಗ ಗೌಡ ಸಂಘದ ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಬಿ. ಆರ್. ಇವರ ಉಪಸ್ಥಿತಿ ಮತ್ತು




**ಶ್ರೀಮತಿ ಎಸ್.ಸಿ. ಹೇಮಲತ ಅವರನ್ನು ಬೀಳ್ಕೊಡುತ್ತಿರುವುದು**

ಸಂಕ್ರಾಂತಿ ಮಿಲನ ಕುರಿತು ಹಿತನುಡಿಗಳು ಗಮನ ಸೆಳೆಯಿತು. ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಮತ್ತು ಡಾ. ವಿ.ಆರ್. ಗುಡ್ಡೇಗೌಡ ಮತ್ತು ಶ್ರೀ ಗುರುದೇವ ದಂಪತಿಗಳಿಗೆ ಬೀಳ್ಕೊಡುಗೆ ಸನ್ಮಾನ ಮತ್ತು ಈ ಕಾರ್ಯಕ್ರಮದ ಬೆನ್ನೆಲುಬಾಗಿ ಕೈ ಜೋಡಿಸಲು ಸಹಕರಿಸಿದ ದೂರದ ಕರುನಾಡಿನಿಂದ ಬಂದಿದ್ದ ಸಮುದಾಯದ ಪೋಷಕರಿಗೆ ಸನ್ಮಾನ ಶ್ರೀಗಳಿಗೆ ಗುರುವಂದನೆ ಮತ್ತು ಶ್ರೀಗಳ ಆಶೀರ್ವಚನ ಈ ರೀತಿಯಾಗಿ ಸಭಾ ಕಾರ್ಯಕ್ರಮ ಚೊಕ್ಕವಾಗಿ ಚಿಕ್ಕದಾಗಿ ಅಚ್ಚುಕಟ್ಟಾಗಿ ನೆರವೇರಿತು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಹೇಮಲತಾ ಗುಡ್ಡೇಗೌಡ ಅವರು ದೆಹಲಿಯನ್ನು ಬಿಟ್ಟು ತಾಯ್ನಾಡಿಗೆ ಮರಳಿದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯವರು ಅಭಿನಂದಿಸಿ ಬೀಳ್ಕೊಟ್ಟರು.

ಸಮುದಾಯದ ಮಕ್ಕಳು, ಮಹಿಳೆಯರಿಂದ ಸಮೂಹ ಗಾಯನ ಮತ್ತು ನೃತ್ಯ,



ಬೆಂಗಳೂರಿನಿಂದ ಆಗಮಿಸಿದ ಕನ್ನಡ ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಕಾರ್ಯಕ್ರಮ 'ಕನ್ನಡದ ಕೋಗಿಲೆಗಳು' ಸೀಸನ್ 2ರ ಸ್ಪರ್ಧಿ ಖ್ಯಾತ ಗಾಯಕಿ ಶ್ರೀಮತಿ ಸವಿತಾ ಗಣೇಶ್ ಪ್ರಸಾದ್ ಮತ್ತು ಸುವರ್ಣ ಸ್ಟಾರ್ ಸಿಂಗರ್‌ನ ಉಪವಿಜೇತ ಗಾಯಕ ರಾಜೀವ್ ಅಗಳಯವರ ತಂಡಗಳಿಂದ ಜಾನಪದ, ಭಾವಗೀತೆ ಮತ್ತು ರಂಗಗೀತೆಗಳು ಮೆಚ್ಚುಗೆ ಪಡೆಯಿತು. ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶಗಳಿಂದ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೀತಿಯ ಕನ್ನಡಿಗರಿಗೆ ಸಾಂಸ್ಕೃತಿಕ ರಸದೌತಣವನ್ನು ನೀಡಿತು.

ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಡಿವಿಜಿಎಸ್‌ನ ಎಲ್ಲಾ ಕುಟುಂಬಗಳ ಸದಸ್ಯರುಗಳಿಗೆ ಪದಾಧಿಕಾರಿಗಳಿಗೆ ಮತ್ತು ಸಹಕಾರ ನೀಡಿದ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳಿಗೆ, ಸದಸ್ಯರುಗಳಿಗೆ ಹಾಗೂ ಈ ಸಂಕ್ರಾಂತಿ ಮಿಲನವನ್ನು ಸಂಕ್ರಾಂತಿ ಜಾತ್ರೆಯನ್ನಾಗಿ ಪರಿವರ್ತನೆ ಮಾಡಿದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳು ಸಲ್ಲಬೇಕು. ದೆಹಲಿ ಒಕ್ಕಲಿಗ ಗೌಡ ಸಂಘದ ಜಂಟಿ ಕಾರ್ಯದರ್ಶಿ ಎ.ಟಿ. ಶ್ರೀನಿವಾಸ್ ಸೊಗಸಾಗಿ ಕಾರ್ಯಕ್ರಮ ನಿರೂಪಿಸಿದರು.

***ಎ.ಟಿ. ಶ್ರೀನಿವಾಸ***










## ಚಿಣ್ಣರ ಲೋಕ

# ಒಂದು ಪುಟಾಣಿ ಕಥೆ

ದೇವರು ಒಂದು ದಿನ ಕತ್ತೇನ ಸೃಷ್ಟಿಸಿ ಅದರ ಹತ್ತಿರ ಹೇಳಿದ. ನೀನು ಒಂದು ಕತ್ತೆ ಬೆಳಗಿನಿಂದ ಸಾಯಂಕಾಲದ ವರೆಗೆ ನೀ ದುಡಿಯಬೇಕು. ನಿನ್ನ ಬೆನ್ನ ಮೇಲೆ ಭಾರ ಇರುತ್ತೆ. ನೀನು ಹುಲ್ಲನ್ನೇ ತಿನ್ನಬೇಕು. ನಿನಗೆ ಅಷ್ಟೊಂದು ಬುದ್ಧಿ ಇರುವುದಿಲ್ಲ. ನೀನು 50 ವರ್ಷಗಳ ಕಾಲ ಬಾಳುತ್ತೀಯ. ಇದಕ್ಕೆ ಕತ್ತೆ ಹೇಳಿತು. ನಾನು ಕತ್ತೆಯಾಗಿ ಇರುತ್ತೇನೆ. ಆದರೆ 50 ವರ್ಷ ಹೆಚ್ಚು. ನನಗೆ 20 ವರ್ಷ ಸಾಕು ಎಂದು ಕೇಳಿಕೊಂಡಿತು. ದೇವರು ಕತ್ತೆಯ ಆಸೆಯನ್ನು ನೆರವೇರಿಸಿದ.

ಆನಂತರ ಒಂದು ನಾಯಿಯನ್ನ ಸೃಷ್ಟಿಸಿ, ಅದರ ಬಳಿ ಹೇಳಿದ. ನೀ ಮನುಜನ ಮನೆಯನ್ನು ಕಾಯುವ ಕಾವಲುಗಾರ. ಅವನ ಪ್ರೀತಿಗೆ ಪಾತ್ರನಾಗಿ ಇರುತ್ತೀಯ. ಅವನು ಉಂಡ ನಂತರ ನಿನಗೆ ನೀಡುತ್ತಾನೆ. ನೀನು 30 ವರ್ಷಗಳ ಕಾಲ ಬಾಳುತ್ತೀಯ.

ಅದಕ್ಕೆ ನಾಯಿ ಹೇಳಿತು. ದೇವರೆ 30 ವರ್ಷ ತುಂಬ ಹೆಚ್ಚು. ನನಗೆ 15 ವರ್ಷ ಸಾಕು ಎಂದು ಕೇಳಿಕೊಂಡಿತು. ದೇವರು ನಾಯಿಯ ಆಸೆಯನ್ನು ನೆರವೇರಿಸಿದ.

ಆನಂತರ ದೇವರು ಕೋತಿಯನ್ನು ಸೃಷ್ಟಿಸಿ ಅದರ ಬಳಿ ಹೇಳಿದ. ನೀ ಒಂದು ಕೋತಿ. ಮರಕ್ಕೆ ಮರ ಜಿಗಿಯಬೇಕು. ನೀ ಆಟಗಳನ್ನ ತೋರಿಸಿ ಜನರಲ್ಲಿ ಸಂತಸವನ್ನು ಮೂಡಿಸು. ನೀನು 20 ವರ್ಷಗಳ ಕಾಲ ಬಾಳುತ್ತಿಯ.

ಅದಕ್ಕೆ ಕೋತಿ ಹೇಳಿತು. 20 ವರ್ಷ ತುಂಬ ಹೆಚ್ಚು. 10 ವರ್ಷ ಸಾಕು ಎಂದು ಕೇಳಿಕೊಂಡಿತು. ದೇವರು ಕೋತಿಯ ಆಸೆಯನ್ನು ನೆರವೇರಿಸಿದ.

ಆನಂತರ ಕೊನೆಯದಾಗಿ ಮನುಜರನ್ನ ಸೃಷ್ಟಿಸಿ ಅವನ ಬಳಿ ಹೇಳಿದ. ನೀನೊಬ್ಬ ಮನುಜ ಪ್ರಪಂಚದಲ್ಲಿನ ಆರು ಬುದ್ಧಿಗಳನ್ನು ಪಡೆದು ಉಳಿದ ಪ್ರಾಣಿಗಳನ್ನ ಆಳುತ್ತೀಯ. ಪ್ರಪಂಚವೇ ನಿನ್ನ ಕೈಯಲ್ಲಿ. ನೀನು 20 ವರ್ಷಗಳ ಕಾಲ ಬಾಳುತ್ತೀಯ.

ಅದಕ್ಕೆ ಮನುಜ ಹೇಳಿದ 20 ವರ್ಷ ಎಂಬುದು ನನಗೆ ತುಂಬ ಕಡಿಮೆ. ಕತ್ತೆ ಬೇಡ ಎಂದ 30 ವರ್ಷಗಳನ್ನ, ನಾಯಿ ಬೇಡ ಎಂದ 15 ವರ್ಷಗಳನ್ನ, ಕೋತಿ ಬೇಡ ಎಂದ 10 ವರ್ಷಗಳನ್ನ, ನನಗೆ ಕೊಟ್ಟು ಬಿಡು. ದೇವರು ಮನುಜನ ಆಸೆಯನ್ನ ನೆರವೇರಿಸಿದ.

ಅಂದಿನಿಂದ ಮನುಜ ಮೊದಲ 20 ವರ್ಷಗಳನ್ನ ಸಂತೋಷದಿಂದ ಬಾಳುತ್ತಾನೆ ಮನುಜನಾಗಿ.

ಮದುವೆಯಾಗಿ ಆನಂತರದ 30 ವರ್ಷಗಳನ್ನ ಕತ್ತೆಯಾಗಿ ಎಲ್ಲಾ ಹೊಣೆಗಳನ್ನ ಎತ್ತಿ ಹಿಡಿದು ಹಗಲು ರಾತ್ರಿ ನೋಡದೆ ದುಡಿಯುತ್ತಾನೆ.

ಮಕ್ಕಳು ಬೆಳೆದು ದೊಡ್ಡವರಾದ ನಂತರ 15 ವರ್ಷಗಳಿಗೆ ಅವನು ಮನೆಯ ನಾಯಾಗಿ ಇದ್ದು ಎಲ್ಲರನ್ನ ಕಾಯುತ್ತಾನೆ. ಎಲ್ಲರೂ ತಿಂದು ಮಿಕ್ಕಿದ್ದನ್ನ ತಿಂದು ಬದುಕುತ್ತಾನೆ.

ನಂತರ ವಯಸ್ಸಾಗಿ ನಿವೃತ್ತಿ ಹೊಂದಿದ ನಂತರ ಕೋತಿಯ ಹಾಗೆ 10 ವರ್ಷಗಳಿಗೆ ಮಗನ ಮನೆಯಿಂದ ಮಗಳ ಮನೆಗೆ, ಮಗಳ ಮನೆಯಿಂದ ಮಗನ ಮನೆಗೆ ಜಿಗಿಯುತ್ತ ತನ್ನ ಮೊಮ್ಮಕ್ಕಳಿಗೆ ಆಟಗಳನ್ನ ತೋರಿಸಿ ಸಂತಸಪಡಿಸುತ್ತಾನೆ.

ಈಗ ತಿಳಿಯಿತೇ ನಾವು ಏಕೆ ಹೀಗಿರುವೆವು ಎಂದು......

***ಚಂದ್ರಶೇಖರ ಜೋಳದರಾಶಿ***

# ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಅವರ ಹುತಾತ್ಮ ದಿನಾಚರಣೆ




ದೆಹಲಿಯ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಸಂಘವು ದಿನಾಂಕ 26.01.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಅವರ 189ನೇ ಹುತಾತ್ಮ ದಿನಾಚರಣೆಯನ್ನು ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಶ್ರೀಧರ್ ರೆಡ್ಡಿ ಅವರು ಸಂಗೊಳ್ಳಿರಾಯಣ್ಣ ಅವರ ಜೀವನಚರಿತ್ರೆ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯನ್ನು ವಿವರಿಸುತ್ತಾ  ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಪೂರ್ವದಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹಚ್ಚಿಸಿದ ಕೀರ್ತಿ ಸಂಗೊಳ್ಳಿರಾಯಣ್ಣನಿಗೆ ಸಲ್ಲುತ್ತದೆ ಎಂದು ತಿಳಿಸಿದರು. ಇದರ ಪರಿಣಾಮವಾಗಿ ಅವರಿಗೆ ಗಲ್ಲು ಮರಣದಂಡನೆ ವಿಧಿಸಲಾಗುತ್ತದೆ ಮತ್ತು ಅವರೊಂದಿಗೆ ಗುರುತಿಸಿಕೊಂಡ ನೇಮಣ್ಣ, ರುದ್ರನಾಯಕ, ಕೋನೇರಿ ಮತ್ತು ಇತರರನ್ನು ಜೀವಾವಧಿ ಶಿಕ್ಷೆಗೊಳಪಡಿಸಿ ಸಮುದ್ರಾಚೆಗೆ ಕಳುಹಿಸಲಾಗಿತ್ತು ಎಂದು ಹೇಳಿದರು.

ಸಂಘದ ಸದಸ್ಯೆ ಶ್ರೀಮತಿ ಆಶಾಲತಾ ಅವರು ಮಾತನಾಡಿ ದೇಶದ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿರಾಯಣ್ಣ ಹುಟ್ಟಿದ್ದು ಆಗಸ್ಟ್ 15, 1798. ಆ ದಿನ ಭಾರತೀಯರಿಗೆ ಸ್ವಾತಂತ್ರ್ಯ ದೊರಕಿದ ದಿನವಾಗಿದೆ. ರಾಯಣ್ಣರಿಗೆ ಮರಣದಂಡನೆಯಾಗಿ ಗಲ್ಲುಗಂಬಕ್ಕೇರಿದ ದಿನ ಜನವರಿ 26, 1831. ಆ ದಿನ ಭಾರತ ಗಣರಾಜ್ಯವಾದ ದಿನ. ಪ್ರಜಾಸತ್ತಾತ್ಮಕ ದಿನ. ಇವೆರಡೂ ದಿನಗಳು ಭಾರತೀಯರಿಗೆ ರಾಷ್ಟ್ರೀಯ ಉತ್ಸವ ದಿನಗಳಾಗಿವೆ. ಇತಿಹಾಸದಲ್ಲಿ ಹಲವಾರು ವ್ಯಕ್ತಿಗಳು ನಮ್ಮ ದೇಶವನ್ನು ಸ್ವಾತಂತ್ರ್ಯಗೊಳಿಸುವಲ್ಲಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ನಮಗೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟಿದ್ದಾರೆ. ಅವರು ದೊರಕಿಸಿ ಕೊಟ್ಟ ಈ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಒಳ್ಳೆಯ ರೀತಿಯಲ್ಲಿ ನಮ್ಮ ದೇಶವನ್ನು ಮುನ್ನಡೆಸಲು ನಮ್ಮಲ್ಲಿ ಏಕತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು. ಹಾಗಾಗಿ ಭಾರತೀಯರಾದ ನಾವು ಏಕತೆಯನ್ನು ಕಾಪಾಡಿಕೊಂಡು ಹೋಗಬೇಕೆಂದರು.

ಸ್ಥಳೀಯ ಕನ್ನಡಿಗರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಸಂಘದ ಅಧ್ಯಕ್ಷ ಆರ್. ಮಹಾದೇವ್ ಅವರು ವಂದಿಸಿದರು.

***ಮಹದೇವ್ ಆರ್.***

# ದೆಹಲಿ ಒಕ್ಕಲಿಗ ಗೌಡ ಸಂಘದಿಂದ ವಾಯು ವಿಹಾರ ಮತ್ತು ಹೊಸ ಆಡಳಿತ ಮಂಡಳಿ ಆಯ್ಕೆ



**ಅನಂತರಾಮ ಅರಳಿ**

ದೆಹಲಿ ಒಕ್ಕಲಿಗ ಗೌಡ ಸಂಘದ ಎಲ್ಲಾ ಕುಟುಂಬ ಸದಸ್ಯರುಗಳು ಈಚೆಗೆ ವಾಯುವಿಹಾರದಲ್ಲಿ ಪಾಲ್ಗೊಂಡಿದ್ದರು. ಆಟೋಟ ಸ್ಪರ್ಧೆಗಳು ಹಾಗೂ ಭೋಜನ ಕೂಟವನ್ನು ಈ ವಾಯುವಿಹಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಹೊಸ ಆಡಳಿತ ಮಂಡಳಿ ಅವಿರೋಧವಾಗಿ ರಚನೆಯಾಯಿತು.

**ನೂತನ ಕಾರ್ಯಕಾರಿ ಸಮಿತಿ ಇಂತಿದೆ** :

ಅಧ್ಯಕ್ಷ ಅನಂತರಾಮ ಅರಳಿ, ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಬಿ.ಆರ್., ಉಪಾಧ್ಯಕ್ಷರು ಮೋಹನ್ ಕುಮಾರ್ ಬಿ.ಎನ್., ಕೆ.ಎಸ್. ಮೂರ್ತಿ, ಜಂಟಿ ಕಾರ್ಯದರ್ಶಿ: ಎ.ಟಿ. ಶ್ರೀನಿವಾಸ್, ಬಿ. ನಾರಾಯಣ, ಖಜಾಂಚಿ: ಮೋಹನ್ ಕುಮಾರ್ ಕೆ.ಪಿ.,

ಸದಸ್ಯರುಗಳು: ಹನುಮೇಗೌಡ  ಜಿ.ಎಮ್., ಗೋವಿಂದರಾಜು, ಲಿಂಗರಾಜು ಎಮ್.ಕೆ., ಜಗದೀಶ್ ಎಚ್.ಎಸ್., ಗಜಾನನ ಶರ್ಮಾ, ಗಿರೀಶ್ ಎಸ್., ಪ್ರತಿಭಾ ಗೌಡ, ಕುಮಾರಿ ಅನಂತ

***ಎ.ಟಿ. ಶ್ರೀನಿವಾಸ್***

# ಗುರಗಾಂವ್ ಕನ್ನಡ ಸಂಘದಲ್ಲಿ ಗಣರಾಜ್ಯೋತ್ಸವ





ದಿನಾಂಕ 26.01.2020 ರಂದು ಗುರುಗಾಂವ್ ಕನ್ನಡ ಸಂಘದ ವತಿಯಿಂದ ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದಲ್ಲಿ 71ನೇ ಗಣರಾಜ್ಯೋತ್ಸವವನ್ನು ಗುರು ಹಿರಿಯರು ಕನ್ನಡ ಕಲಿಕಾ ಕೇಂದ್ರದ ಮಕ್ಕಳ ಜೊತೆ ಸೇರಿ ರಾಷ್ಟ್ರಧ್ವಜಕ್ಕೆ ಪುಷ್ಪ ಅರ್ಚನೆ ಮಾಡಿ ರಾಷ್ಟ್ರಗೀತೆ ಹಾಡುವ ಮೂಲಕ ಆಚರಿಸಿದರು. ಶಿಕ್ಷಕಿ ಶ್ರೀಮತಿ ಸುಜಾತ ನಿಂಬಾಳ್ ಅವರು ಸಂವಿಧಾನದ ಬಗ್ಗೆ ಚಿಕ್ಕದಾಗಿ, ಚೊಕ್ಕದಾಗಿ ವಿವರಿಸಿದರು.

ಈ ದಿನ ಬ್ರಿಟಿಷರ ಕಾನೂನು ತ್ಯಜಿಸಿ ಭಾರತ ಸಂವಿಧಾನ ರಚಿಸಿದ ದಿನ. ರಾಜ ಮಹಾರಾಜರು ಹಾಗೂ ಪಾಳೇಯಗಾರರ ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಒಗ್ಗೂಡಿಸಿ ಒಕ್ಕೂಟ ರಾಷ್ಟ್ರವನ್ನಾಗಿ ಮಾಡಿದ ಗಣರಾಜ್ಯೋತ್ಸವ ದಿನವು ಭಾರತದ ಇತಿಹಾಸದಲ್ಲಿ ಮಹತ್ವದ ದಿನವಾಗಿದೆ. ಇಂದಿನ ಮಕ್ಕಳಲ್ಲಿ ಸಂವಿಧಾನದ ಅರಿವು, ಪಾಲನೆ ಅತಿಮುಖ್ಯವಾಗಿದ್ದು, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ಬದುಕಿನ ಮೂಲತತ್ವವೆಂದು ನಂಬಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಮೊದಲಾದ ಸತ್ಪುರುಷರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು. ಸಂವಿಧಾನದ ಹಕ್ಕು ಹಾಗೂ ಕರ್ತವ್ಯಗಳನ್ನು ಭಾರತೀಯರಾದ ನಾವು ಅನುಸರಿಸಬೇಕು ಎಂದು ತಿಳಿಸಿದರು.

ಈ ಬಾರಿಯ ಗಣತಂತ್ರ ದಿನೋತ್ಸವದ ಸಂಬಂಧ ದೆಹಲಿಯಲ್ಲಿ ವಿವಿಧ ರಾಜ್ಯಗಳ ಸ್ತಬ್ಧ ಚಿತ್ರಗಳು, ರಾಜ್ಯದ ಕಡೆಯಿಂದ ಬಸವಣ್ಣನವರ ಸ್ತಬ್ಧ ಚಿತ್ರ ದೆಹಲಿಯಲ್ಲಿ ಗಮನ ಸೆಳೆದ ಬಗ್ಗೆ ಮಾಹಿತಿ ನೀಡಿದರು. ಕಾರ್ಯದರ್ಶಿ ಕೃಷ್ಣಪ್ಪನವರು ಸಂವಿಧಾನದ ಹಿರಿಮೆಯ ಬಗ್ಗೆ ಮಕ್ಕಳಿಗೆ ತಿಳಿಸುತ್ತ. ಮಕ್ಕಳು ಒಳ್ಳೆಯ ಸಂಸ್ಕೃತಿಯನ್ನು ಕಲಿಯಲು ರಾಮಾಯಣ ಮತ್ತು ಮಹಾಭಾರತ ಗ್ರಂಥಗಳನ್ನು ಓದುವಂತೆ ಹಿತವಚನ ನಿಡಿದರು.

12ನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ಮಕ್ಕಳನ್ನು ಗೌರವಿಸಿದರು. ಅಧ್ಯಕ್ಷರು ಸಾಯಿ ಪ್ರಸಾದ್ ಹೆರಾಂಜಾಲ್, ಉಪಾಧ್ಯಕ್ಷರಾದ ಶ್ರೀಮತಿ ಲಲಿತಾಂಬ ರಾಜೇಶ್, ಸಾಬು ದರ್ಗಾ, ಖಜಾಂಚಿ ಮರಿಬಸಪ್ಪ ಮತ್ತು ಕನ್ನಡ ಕಲಿಕಾ ಕೇಂದ್ರದ ಮಕ್ಕಳ ಪೋಷಕರು ಉಪಸ್ಥಿತರಿದ್ದರು.

***ಚಂದ್ರಶೇಖರ ಜೋಳದರಾಶಿ***

# ಸ್ನೇಹಾ ಅಸೋಸಿಯೇಶನ್‌ನಲ್ಲಿ ಆರೋಗ್ಯ ಕುರಿತು ಅರಿವು



ಹೊಸ ವರ್ಷದ ಶುಭಾಶಯಗಳೊಂದಿಗೆ ಎಲ್ಲರೂ ಸ್ವಸ್ಥರಾಗಿ ಈ ಹೊಸ ವರುಷವನ್ನು ಕಳೆಯಲಿ ಅನ್ನುವ ಉದ್ದೇಶದಿಂದ ಈ ತಿಂಗಳ 'ಸ್ನೇಹಾ' ಸಭೆಯಲ್ಲಿ ಇದಕ್ಕನುಗುಣವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದಸ್ಯೆ ಮತ್ತು ಉಪಾಧ್ಯಕ್ಷೆ ಶ್ರೀಮತಿ ಸರೋಜಾ ಮಾಧವ ಅವರು ದೈಹಿಕ, ಮಾನಸಿಕ ಆರೋಗ್ಯದ ಮುಂಜಾಗ್ರತೆಯ ಕ್ರಮವಾಗಿ ಹೇಗೆ ದೈನಂದಿನ ವ್ಯಾಯಾಮದ ಮೂಲಕ ಕೆಲವೊಂದು ರೋಗಗಳನ್ನು ನಿಯಂತ್ರಣದಲ್ಲಿ ತರಬಬಹುದು ಎಂದು ಅವರ ಸ್ವಂತ ಅನುಭವಗಳಿಂದ ಆದ ಉಪಯೋಗವನ್ನು ಸ್ನೇಹಿತೆಯರಿಗೆ ಅತೀ ಸರಳ ಹಾಗೂ ಸ್ವತಃ ಪ್ರದರ್ಶನ ಮಾಡಿ ವಿಸ್ತಾರದಿಂದ ತಿಳಿಸಿದರು.

ಹೊರ ವರುಷ, ಹೊಸ ಹುರುಪು, ಸಂಕ್ರಾಂತಿಯ ಎಳ್ಳುಬೆಲ್ಲವನ್ನು ಹಂಚಿ 'ಎಳ್ಳು ಬೆಲ್ಲ ಕೊಟ್ಟೊ ಒಳ್ಳೊಳ್ಳೆ ಮಾತಾಡೋನು" ಎಂಬಂತೆ ಕರ್ನಾಟಕದಲ್ಲಿ ಇದ್ದ ಅನುಭವ ಆಯಿತು.

ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್ ಅವರು ಒಂದು ಆಸಕ್ತಿದಾಯಕವಾದ 'ರಸಪ್ರಶ್ನೆ' ಆಡಿಸಿದರು. ಎಲ್ಲರೂ ಜನವರಿ ತಿಂಗಳ ಸಭೆಯನ್ನು ತುಂಬಾ ಪ್ರಶಂಶಿಸಿದರು. ಫೆಬ್ರವರಿ ತಿಂಗಳಲ್ಲಿ ಆಗುವ ನಮ್ಮ ವಾರ್ಷಿಕ ಪಿಕ್‌ನಿಕ್ ಬಗ್ಗೆ ವಿಸ್ತಾರವಾಗಿ ಹೇಳಿ, ಎಲ್ಲರೂ ಪಿಕ್‌ನಿಕ್‌ಗೆ ಬಂದು ಆಟೋಟಗಳಲ್ಲಿ ಭಾಗವಹಿಸಿ ಆನಂದಿಸಲು ವಿನಂತಿಸಿದರು.

***ರಾಜೇಶ್ವರಿ ಕಲ್ಲೂರು***

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 71ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿ ಸಾಹಿತಿ, ಶಿಕ್ಷಣ ತಜ್ಞ ಪ್ರೊ. ರಾಧಾಕೃಷ್ಣ ಅವರು ಧ್ವಜಾರೋಹಣ ನೆರವೇರಿಸಿದರು. ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿ ಮಾತನಾಡಿದ ಅವರು ನಮ್ಮ ದೇಶದಲ್ಲಿ ಹಲವಾರು ಜಾತಿ, ಧರ್ಮ, ಭಾಷೆಗಳಿರಬಹುದು. ಆದರೆ ನಮಗಿರುವುದು ಒಂದೇ ದೇಶ. ನಮ್ಮನ್ನು ರಕ್ಷಣೆ ಮಾಡುವ ಸಂವಿಧಾನವೇ ನಮ್ಮ ನಿಜವಾದ ನಾಯಕ. ಕನ್ನಡಿಗರಿಗೆ 12ನೇ ಶತಮಾನದಲ್ಲಿದ್ದ ಅನುಭವ ಮಂಟಪವೇ ಮೊದಲ ಸಂಸತ್ತು ಆಗಿತ್ತು. ಹಾಗೆಯೇ ಶರಣರ ವಚನಗಳೇ ಸಂವಿಧಾನವಾಗಿತ್ತು. ಬಸವಣ್ಣ ಹೇಳಿದಂತೆ ಇವನಾರವ ಇವನಾರವ ಇವನಾರವನೆಂದು ಎನಿಸದಿರಯ್ಯ. ಇವ ನಮ್ಮವ ಇವ ನಮ್ಮವನೆಂದು ಎನಿಸಯ್ಯ. ಇದೇ ಸಂವಿಧಾನದ ನಿಜವಾದ ಅರ್ಥ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂವಿಧಾನವನ್ನು ಸರಳೀಕರಿಸಿ ಹೇಳುವುದಾದರೆ ಮೊದಲಿಗೆ ನಮ್ಮ ಮನೆಯೇ ಸಂಸತ್ತು, ಸರಿತಪ್ಪುಗಳನ್ನು ಮೊದಲು ತಿಳಿಸಿಕೊಡುವ ನಮ್ಮ ತಂದೆ ತಾಯಿಗಳೇ ನಮ್ಮ ಸಂವಿಧಾನ. ನಮ್ಮನ್ನು ಈ ಸಮಾಜಕ್ಕೆ ಸತ್ಪ್ರಜೆಗಳಾಗಿ ನಿರ್ಮಾಣ ಮಾಡುವ ಶಿಕ್ಷಕರು ಕೂಡ ಸಂವಿಧಾನವೇ. ಈ ಸಂದರ್ಭದಲ್ಲಿ ನಮ್ಮ ಬದುಕಿಗೆ ದಾರಿದೀಪವಾದ ಸಂವಿಧಾನವನ್ನು ರಚಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ನಾವೆಲ್ಲರೂ ನೆನೆಯಲೇಬೇಕು ಎಂದು ಹೇಳಿದರು.

ಉಪಾಧ್ಯಕ್ಷರಾದ ಚಂದ್ರಶೇಖರ ಎನ್. ಪಿ., ಮತ್ತು ಟಿ. ಎಂ. ಮೈಲಾರಪ್ಪ, ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಸಿ. ಎಂ. ನಾಗಾರಾಜ, ತಿಮ್ಮಪ್ಪ ಜಿ. ಆರ್., ಮಾಲಿನಿ ಪ್ರಹ್ಲಾದ್, ದೀನಾ ಜಾಯ್ಸ್, ಅನಂತರಾವ್ ದೇಸಾಯಿ, ಸಂತೋಷ ಕೆ. ಕೆ., ಬಿ. ಎನ್. ಮೋಹನ್ ಕುಮಾರ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ದೇಶಭಕ್ತಿಗೀತೆ ಹಾಡಿದರು. ಗಣರಾಜ್ಯೋತ್ಸವ ಹಾಗೂ ಸಂವಿಧಾನದ ಮಹತ್ವದ ಬಗ್ಗೆ ಭಾಷಣ ಮತ್ತು ಸುಶ್ರಾವ್ಯವಾದ ದೇಶಭಕ್ತಿಗೀತೆ ಪ್ರಸ್ತುತಗೊಂಡಿತು. ಪ್ರಾಂಶುಪಾಲ ಪ್ರಶಾಂತಕುಮಾರ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್ ವಂದಿಸಿದರು. ಶಿಕ್ಷಕರಾದ ಪ್ರೇಮಿಳಾ ಹಾಗೂ ಬಿದಿಶಾ ಕಾರ್ಯಕ್ರಮ ನಿರ್ವಹಿಸಿದರು.

***ಅರವಿಂದ ಬಿಜ್ಜೈ***

## ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಆಯ್ಕೆಯಾದ ನೂತನ ಆಡಳಿತ ಮಂಡಳಿ 2020-22



ವಸಂತ ಶೆಟ್ಟಿ ಬೆಳ್ಳಾರೆ
ಅಧ್ಯಕ್ಷ



ಎನ್.ಪಿ. ಚಂದ್ರಶೇಖರ
ಉಪಾಧ್ಯಕ್ಷ



ಟಿ.ಎಂ. ಮೈಲಾರಪ್ಪ
ಉಪಾಧ್ಯಕ್ಷ



ಡಾ. ಎಂ.ಎಸ್. ಶಶಿಕುಮಾರ್
ಕಾರ್ಯದರ್ಶಿ




ಟಿ.ಪಿ. ಬೆಳ್ಳಿಯಪ್ಪ
ಖಜಾಂಚಿ

### ಸದಸ್ಯರು



ಸಿ.ಎಂ. ನಾಗರಾಜ



ಚೆನ್ನು. ಎಸ್. ಮಠದ



ತಿಮ್ಮಪ್ಪ ಜಿ.ಆರ್.



ಮಾಲಿನಿ ಪ್ರಹ್ಲಾದ್



ಜಯಶ್ರೀ ಎ.



ಗಿರೀಶ್ ಎಸ್.



ಅನಂತರಾವ್ ದೇಸಾಯಿ



ದೀನಾ ಜಾಯ್ಸ್



ಸಂತೋಷ್ ಕೆ.ಕೆ.



ಬಿ.ಎನ್. ಮೋಹನ್ ಕುಮಾರ್

# ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ದೆಹಲಿಯ ಮಕ್ಕಳು



ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ಆದಿಚುಂಚನಗಿರಿ ಮಹಾ ಸಂಸ್ಥಾನ ಶಾಖಾ ಮಠ ಹಾಸನ ಇವರ ಸಹಯೋಗದೊಂದಿಗೆ ಹಾಸನದಲ್ಲಿ ಇತ್ತೀಚೆಗೆ ಎರಡು ದಿನಗಳ ಕಾಲ ಪ್ರಪ್ರಥಮ ಅಖಿಲ ಭಾರತ ಕನ್ನಡ ಮಕ್ಕಳ ಸಾಹಿತ್ಯ ಸಮ್ಮೇಳನ ನಡೆಯಿತು.

ಪರಿಸರವಾದಿ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಚ. ನ. ಅಶೋಕ್ ಅವರ ನೇತೃತ್ವದಲ್ಲಿ ನಡೆದ ಈ ಸಮ್ಮೇಳನದಲ್ಲಿ ದೆಹಲಿ ಮತ್ತು ಹರಿಯಾಣ ರಾಜ್ಯವನ್ನು ಪ್ರತಿನಿಧಿಸಿ ಒಟ್ಟು ಆರು ವಿದ್ಯಾರ್ಥಿಗಳು ಭಾಗವಹಿಸಿದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಾದ ಕು। ಅಭಿಷೇಕ ಉಭಾಳೆ ಸಮ್ಮೇಳನದ ಸಹಾಧ್ಯಕ್ಷರಾಗಿ ಮತ್ತು ಕು। ಪಾರ್ವತಿ ಎಸ್. ಆರ್. ವಿಚಾರಗೋಷ್ಠಿಯ ಅತಿಥಿಯಾಗಿ, ವಿದ್ಯಾರ್ಥಿ ಕವಿಗೋಷ್ಠಿಯಲ್ಲಿ ಕವನ ವಾಚಕರಾಗಿ ಕು। ಶ್ರೇಷ್ಠಾ ಎಚ್. ತೇಲಿ, ಕು। ಶ್ರೇಯಾ ಎಚ್. ತೇಲಿ, ಕು। ಕುಶಾಲ್ ಎಂ. ಹಾಗೂ ಗುರುಗಾಂವ್‌ನ ಕನ್ನಡ ವಿದ್ಯಾರ್ಥಿ ಕು। ತರುಣ್ ಕೆ. ಅವರು ಭಾಗವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ತುಮಕೂರಿನ ಕೀರ್ತನಾ ನಾಯಕ್ ಮತ್ತು ಸಹಾಧ್ಯಕ್ಷರಾಗಿ ದಕ್ಷಿಣ ಕನ್ನಡದ ಪ್ರದ್ಯುಮ್ನ ಮೂರ್ತಿ, ಮಂಡ್ಯದ ರೇವಂತ್ ರಾಜೀವ್ ಜೊತೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ೯ನೇ ತರಗತಿಯ ವಿದ್ಯಾರ್ಥಿ ಅಭಿಷೇಕ್ ಉಭಾಳೆ ಆಯ್ಕೆಯಾಗಿರುವುದು ದೆಹಲಿ ಕನ್ನಡಿಗರಿಗೆ ಅಭಿಮಾನದ ಸಂಗತಿ.

ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾ ಸಂಸ್ಥಾನದ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ॥ ಬಾಲಗಂಗಾಧರನಾಥ ಸ್ವಾಮೀಜಿ ಅವರ ಸ್ಮರಣೆಯೊಂದಿಗೆ ಹಾಗೂ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರ ಆಶೀರ್ವಾದದೊಂದಿಗೆ ನಡೆದ ಈ ಸಮ್ಮೇಳನಕ್ಕೆ ಹಿರಿಯ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಚಾಲನೆ ನೀಡಿದರು. ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸಹಾಧ್ಯಕ್ಷರಾದ ಕು। ಅಭಿಷೇಕ್ ಉಭಾಳೆ ಅವರು 'ಸಾಹಿತ್ಯದ ಒಲವಿರುವವರು ಬದುಕನ್ನು ಕಟ್ಟಿಕೊಳ್ಳಬಲ್ಲರು'. ಆದ್ದರಿಂದ, ಪ್ರತಿಯೊಬ್ಬರು ಎಲ್ಲಿದ್ದರೂ ಸರಿಯೇ ತಮ್ಮ ಮಾತೃಭೂಮಿಯನ್ನು, ಮಾತೃಭಾಷೆಯನ್ನು ಮರೆಯದೆ ಕನ್ನಡದ ದೀಪವಾಗಿ ಬೆಳಗಿ ಸಾಹಿತ್ಯದ ಹೊನಲಲ್ಲಿ ಕರಗಿ' ಎಂಬುದೇ ನನ್ನಆಶಯ ಎಂದು ಹೇಳಿದರು.



ಕು। ಅಭಿಷೇಕ ಉಭಾಳೆ

ಗೋವಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಹಾಗೂ ದೆಹಲಿ ಮುಂತಾದ ರಾಜ್ಯಗಳಿಂದ ಸಾವಿರಾರು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಸಮ್ಮೇಳನಕ್ಕೆ ಸಾಕ್ಷಿಯಾದರು. ಇದೇ ಸಂದರ್ಭದಲ್ಲಿ ಮಕ್ಕಳ ಜೊತೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಸೋಮನಾಥ ಎಸ್. ಬಿರಾದಾರ್, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ಕೇಂದ್ರ ಘಟಕದ ನಿರ್ದೇಶಕ ಅರುಣ್, ದೆಹಲಿ ಘಟಕದ ಅಧ್ಯಕ್ಷ ಅರವಿಂದ ಬಿಜ್ಜೈ, ಸಾಹಿತ್ಯಾಭಿಮಾನಿ ರಾಮಚಂದ್ರ ಎಸ್. ಉಭಾಳೆ ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದು ಸಹಕರಿಸಿದರು.



ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ

***ಅರವಿಂದ ಬಿಜ್ಜೈ***

# ಮರೆಯಲಾಗದ ಚಾರ್‌ಧಾಮ ಯಾತ್ರೆ



ನನ್ನ ಮಗನಾದ ಡಾ. ಮಂಜುನಾಥ ಗೋಸಲ್ ಧಾರವಾಡದಿಂದ ನನ್ನ ದೆಹಲಿಗೆ ಕರೆಸಿ ನನ್ನನ್ನು ಯೋಗ ಗ್ರೂಪ್ (ಸೌತ್ ಎಕ್ಸೆಟೆನ್ಷನ್) ಜೊತೆಗೆ ಚಾರ್‌ಧಾಮ ಯಾತ್ರೆಗೆ ಕಳುಹಿಸಿದನು. ದಿನಾಂಕ 25.09.2019ರಂದು ಮಧ್ಯಾಹ್ನ 3.20ಕ್ಕೆ ನಾವು ನವದೆಹಲಿಯ ರೈಲ್ವೇ ಸ್ಟೇಷನ್‌ನಿಂದ ಯಾತ್ರೆಯನ್ನು ಪ್ರಾರಂಭಿಸಿದೆವು. ಈ ಯಾತ್ರೆಯು ಯೋಗ ಶಿಕ್ಷಕರಾದ ಶ್ರೀಯುತ ಸುನೀಲ ನಾಗಪಾಲ್ ಅವರ ನೇತೃತ್ವದಲ್ಲಿ ಒಟ್ಟು 19 ಯಾತ್ರಿಗಳನ್ನು ಒಳಗೊಂಡಿತ್ತು. ನಾವು ಸಾಯಂಕಾಲ 7.40ಕ್ಕೆ ಹರಿದ್ವಾರ ತಲುಪಿದೆವು. ಎಲ್ಲರು ಹರಿದ್ವಾರ ಭವನದಲ್ಲಿ ಉಳಿದುಕೊಂಡು ಬೆಳಗ್ಗೆ ಬೇಗನೆ ಎದ್ದು ಗಂಗಾ ಸ್ನಾನವನ್ನು ಮಾಡಿ ಟಾಪ್‌ಹಿಲ್ 728 ಬಸ್ಸಿನಲ್ಲಿ ನಮ್ಮ ಮುಂದಿನ ಪ್ರಯಾಣ ಶುರು ಆಯಿತು. ನಮ್ಮ ಪ್ರಯಾಣದ ದಾರಿಯ ಬದಿಯಲ್ಲಿ ಯುಮುನಾ ನದಿ ಹರಿಯುತ್ತಿತ್ತು. ಒಂದು ಕಡೆ ಅತೀ ಎತ್ತರವಾದ ಪರ್ವತಗಳ ಸಾಲಾದರೆ ಇನ್ನೊಂದು ಬದಿಯಲ್ಲಿ ಯಮುನೆ ನೀರು ಹರಿಯುತ್ತಿತ್ತು. ಬಸ್ಸಿನಲ್ಲಿ ಎಲ್ಲರೂ ಮನೆಯಲ್ಲಿ ಮಾಡಿದ ತಿಂಡಿ ತಿನಿಸುಗಳನ್ನು ತಿನ್ನುತ್ತ ಹಾಡುಗಳನ್ನು ಹಾಡುತ್ತ ಪ್ರಯಾಣ ಹಿತಕರವಾಗಿ ಸಾಗಿತ್ತು. ರಾತ್ರಿ ನ್ಯೂಗಾನ ಎಂಬ ಊರಿನಲ್ಲಿ ದೇವ ದರ್ಶನ ಎಂಬ ಹೋಟೆಲ್‌ನಲ್ಲಿ ತಂಗಿದೆವು. ಬೆಳಗ್ಗೆ ಯಮುನೋತ್ರಿಯ ಕಡೆಗೆ ಹೊರಟೆವು. ದಾರಿ ತುಂಬ ಕಷ್ಟಕರ. ಮುಂದೆ ರಾತ್ರಿ ಕರದ ಎನ್ನುವ ಊರಿನಲ್ಲಿ ತಂಗಿದೆವು (ಸೆಂಟ್ರಲ್ ಪ್ಯಾಲೇಸ್ ಹೋಟೆಲ್‌ನಲ್ಲಿ). 27.09.2019ಬೆಳಗ್ಗೆ ಎದ್ದು ಯಮುನೋತ್ರಿಯ ಯಾತ್ರೆ ಶುರು ಮಾಡಿದೆವು. ಕೇವಲ 35 ಕಿ.ಮೀ ಮಾತ್ರ ಇತ್ತು. ಬೆಳಗಿನ ಸೃಷ್ಟಿ ಸೌಂದರ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದು ಯಾವ ದಿಕ್ಕಿನಲ್ಲಿ ನೋಡಿದರೂ ಹಸಿರಾದ ಮರಗಳು, ದಟ್ಟವಾದ ಕಾಡು, ಯಮುನೋತ್ರಿ 5 ಕಿ.ಮೀ. ಇರುವಾಗಲೇ ಎಲ್ಲ ಗಾಡಿಗಳು ನಿಂತವು. ಮುಂದಿನ ಪ್ರಯಾಣ ಕುದುರೆ, ಪಾಲಕಿ ಇಲ್ಲದಿದ್ದರೆ ಕಾಲ್ನಡಿಗೆಯಿಂದ ಹೋಗಬೇಕೆಂದರು. ನಾವೆಲ್ಲರೂ ಪಾಲಕಿಯಲ್ಲಿ ಹೋದೆವು. ಹೋಗುವಾಗ ದಾರಿಯ ಉದ್ದಕ್ಕೂ ಮಳೆ, ಚಳಿ, ಕಾರ್ಮೋಡಗಳು ಕವಿದವು. ಯಮುನೆಯ ಉಗಮ ಸ್ಥಾನವನ್ನು ತಲುಪಿದೆವು. ಅಲ್ಲಿ ಮೂರು ಮೀಟರ್ ಅಂತರದಲ್ಲಿ ತಣ್ಣೀರು ಹಾಗೂ ಬಿಸಿ ನೀರಿನ ಹೊಂಡಗಳಿದ್ದವು. ಸ್ನಾನವನ್ನು ಮುಗಿಸಿ ಯಮುನೆಯ ದರ್ಶನವನ್ನು ಪಡೆದು ಪಾಲಕಿಯಿಂದ ಕೆಳಗೆ ಇಳಿದೆವು. ಪಾಲಕಿಯನ್ನು ಹೊತ್ತೊಯ್ಯುವವರ ಜೀವನ ಕಷ್ಟಕರ ಎನ್ನಿಸಿತ್ತು. ತಿರುಗಿ ನಮ್ಮ ಹೋಟೆಲಿಗೆ ಬಂದು ತಂಗಿದೆವು.

28.09.2019 ಅಂದು ಮಹಾನವಮಿಯ ಅಮವಾಸ್ಯೆ ಬೆಳಗ್ಗೆ 5ಗಂಟೆಗೆ ನಮ್ಮ ಪ್ರಯಾಣ ಉತ್ತರ ಕಾಶಿಗೆ, ಪರ್ವತಗಳ ಸಾಲುಗಳ ಜೊತೆಗೆ ಪ್ರಯಾಣ ನಡೆಸಿದೆವು. ನಾವು ಉತ್ತರ ಕಾಶಿ ಸಾಯಂಕಾಲ ತಲುಪಿದೆವು. ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿ, ಶಕ್ತಿದೇವಿಗೆ ಪೂಜೆ ಸಲ್ಲಿಸಿದೆವು. ಕಾಶಿ ವಿಶ್ವನಾಥನನ್ನು ಸುತ್ತುವರೆದ ಪರ್ವತಗಳನ್ನು 'ಶ್ವೇತ ಪರ್ವತ" ಅಂತ ಹೇಳುತ್ತಿದ್ದರು. ರಾತ್ರಿ ನಾವು ಹರಿಓಂ ಹೋಟೆಲ್‌ನಲ್ಲಿ ಉಳಿದು ಬೆಳಗ್ಗೆ 29.09.2019ರಂದು ಮುಂಜಾನೆ ಗಂಗೆಯ

ಉಗಮಸ್ಥಾನವಾದ ಗಂಗೋತ್ರಿಗೆ ಪ್ರಯಾಣ ಬೆಳೆಸಿದೆವು. ದಾರಿ ತುಂಬಾ ಕಠಿಣ. ದಾರಿಯಲ್ಲಿ ಸೇಬು ಹಣ್ಣಿನ ಫಾರ್ಮುಗಳನ್ನು ನೋಡಿ ಖುಷಿ ಪಟ್ಟೆವು. ಗಂಗೆಯ ನೀರು ಹಾಲಿನಂತೆ ಶುಭ್ರವಾಗಿ ಹೊಳೆಯುತ್ತಿತ್ತು. ಗಂಗಾ ಮಂದಿರವನ್ನು ತಲುಪಿ, ದಂಡೆಯ ಮೇಲೆ ಸ್ನಾನ ಮುಗಿಸಿ ಗಂಗೆಯ ಪೂಜೆ ಮುಗಿಸಿ ಎಲ್ಲರೂ ಆರತಿಯನ್ನು ಮಾಡಿದೆವು. ಪಂಡಿತರು ಭಗೀರಥ ಋಷಿಯು ಹೇಗೆ ಗಂಗೆಯನ್ನು ಭೂಲೋಕಕ್ಕೆ ತಂದರು ಎಲ್ಲವನ್ನು ವಿವರಿಸಿದರು.

30.09.2019ರಂದು ಮುಂಜಾನೆ ಕೇದಾರನಾಥ ಕಡೆಗೆ ಯಾತ್ರೆ ಪ್ರಾರಂಭಿಸಿದೆವು. ವಿಸ್ತಾರವಾದ 'ಟೆಹರಿ' ಸರೋವರವನ್ನು ಸುತ್ತುತ್ತ ರುದ್ರಪ್ರಯಾಗ, ಸೋನ ಪ್ರಯಾಗ, ತ್ರಿಯೋಗಿ ನಾರಾಯಣ, ಗೌರಿ ಕುಂಡ ಅನೇಕ ಊರುಗಳನ್ನು ದಾಟಿ ರಾತ್ರಿ 10ಗಂಟೆಗೆ ರಾಂಪೂರದಲ್ಲಿ ಬಂದು ತಂಗಿದೆವು. 1.10.2019ಕ್ಕೆ ಮುಂಜಾನೆ ಪಾಟಿ ಎಂಬ ಹೆಲಿಪ್ಯಾಡ್‌ಗೆ ಹೋದೆವು. ನಮ್ಮ ಟಿಕೆಟ್ ಯುಟಿಆರ್ ಹೆಲಿಕಾಪ್ಟರ್‌ನಲ್ಲಿ ಬುಕ್ ಆಗಿತ್ತು. ಅಲ್ಲಿ ಬೆಳಗ್ಗೆ 7ಗಂಟೆಯಿಂದ 11ರವರೆಗೆ ಕಾದೆವು. ಮಧ್ಯಾಹ್ನ 12ಗಂಟೆಗೆ ವಾತಾವರಣ ತಿಳಿಯಾಯಿತು. ಹೆಲಿಕಾಪ್ಟರ್ ಸೇವೆ ಶುರುವಾಯಿತು. ನಾವು ಕೇವಲ 20ನಿಮಿಷದಲ್ಲಿ ಕೇದಾರನಾಥ ತಲುಪಿದೆವು. ಅಲ್ಲಿ ಧಾರಾಕಾರವಾದ ಮಳೆ, ಚಳಿ, ವಿಶಾಲವಾದ ಫ್ಲ್ಯಾಟ್‌ಪಾರಂ ಮಧ್ಯೆ ಮಂದಿರ ಸುಂದರವಾಗಿತ್ತು. ಬಸವಣ್ಣನ ಆಕಾರದ ಕೇದಾರನಾಥನ ಮೂರ್ತಿ ಕಲ್ಲಿನದ್ದು. ಅದರ ಮುಂದೆ ಬಂಗಾರದ ಬಸವಣ್ಣನ ಮೂರ್ತಿ. ಅದರ ಕಿವಿಯಲ್ಲಿ ನಮ್ಮ ಇಷ್ಟಾರ್ಥವನ್ನು ಬೇಡಿಕೊಂಡರೆ ಈಡೇರುವುದು ಎನ್ನುವ ನಂಬಿಕೆ. ಮಂದಿರದಿಂದ ಹೊರಬಂದು ಹೆಲಿಪ್ಯಾಡ್ ತಲುಪಿದೆವು. ಹೆಲಿಕಾಪ್ಟರ್ ಸೇವೆ ಮುಕ್ತಾಯವಾಗಿತ್ತು. ಅಲ್ಲಿಂದ ಪಾಟಿ ಹೋಗಲು 18ಕಿ.ಮೀ ಇತ್ತು. ಕೆಲವರು ಕಾಲ್ನಡಿಗೆಯಿಂದ ಇಳಿದರು. ನಾವು 60ವರ್ಷದ ಮೇಲಿನವರಾಗಿದ್ದರಿಂದ ಅಲ್ಲಿಯೇ ಉಳಿದುಕೊಂಡೆವು. ತುಂಬ ಚಳಿ ರಾತ್ರಿಯ ಉಷ್ಣಾಂಶ -3ಡಿಗ್ರಿ ಆಗಿತ್ತು. ಹೇಗೋ ತಡೆದುಕೊಂಡೆವು. ಬೆಳಗ್ಗೆ 5ಗಂಟೆಗೆ ಕೇದಾರನಾಥನ ದರ್ಶನ ಮಾಡಿ, 02.10.2019ರಂದು ಪಾಟನ್ನು ತಲುಪಿ ರಾಂಪೂರನ ಹೋಟೆಲ್‌ನಲ್ಲಿ ದಿನನಿತ್ಯದ ಕಾರ್ಯ ಮುಗಿಸಿ ಮಧ್ಯಾಹ್ನ 12ಗಂಟೆಗೆ ತ್ರಿಯೋಗಿ ನಾರಾಯಣ ದೇವಸ್ಥಾನ ನೋಡಲು ಹೊರಟೆವು. ದಕ್ಷ ಬ್ರಾಹ್ಮಣನ ಆಹುತಿಯಾದ, ಶಿವಪಾರ್ವತಿಯರ ಮದುವೆಯಾದ ಕಥೆಗಳನ್ನು ಕೇಳಿ ಅಲ್ಲಿಯೇ ರಾತ್ರಿ ಕಳೆದು 03.10.2019ಕ್ಕೆ ಬೆಳಗ್ಗೆ ಪ್ರಯಾಣ ನಡೆಸಿದೆವು. ಮುಂಗೋಶಿ, ಚಮೋಲಿ ಜಿಲ್ಲೆ, ಪೀಪಲ ಕೋಟೆ, ಗರುಡಗಂಗಾ, ಜೋಶೀಮಠ, ಪಾಂಡುಕೇಶ್ವರ ಊರುಗಳನ್ನು ದಾಟಿದೆವು. ಮುಂದೆ ಪ್ರಯಾಣ ಮಾಡಲಾಗಲಿಲ್ಲ ಏಕೆಂದರೆ ಮಾರ್ಗದಲ್ಲಿ ಕಲ್ಲು, ಮಣ್ಣು ಉರುಳಿ ರಸ್ತೆ ಮುಚ್ಚಿ ಹೋಗಿತ್ತು. ನಾವು ಮರಳಿ ಪೀಪಲಕೋಟಿಗೆ ಬಂದು ರಾತ್ರಿಯನ್ನು ಅಲ್ಲಿ ಕಳೆದೆವು. 04.10.2019ರಂದು ಗರುಡಗಂಗಾ, ಪಾಂಡುಕೇಶ್ವರ ಬಂದು ತಲುಪಿದೆವು. ಮಾರ್ಗ ತುಂಬ ಕಠಿಣ. ಒಂದೊಂದೇ ವಾಹನವನ್ನು ಬಿಡುತ್ತಿದ್ದರು. ಅಲಕನಂದ ನದಿಯ ದಡದ ಕೂಡ ನಮ್ಮ ಪ್ರಯಾಣ ನಡೆಸಿ, ಬದರಿನಾಥ ಮಂದಿರಕ್ಕೆ ಮುಟ್ಟಿದೆವು. ಬದರಿನಾಥನ ದರ್ಶನ ಮುಗಿಸಿ 05.10.2019 ಮುಂಜಾನೆ ಪ್ರಕೃತಿಯ ಸೌಂದರ್ಯವನ್ನು ವೀಕ್ಷಿಸುತ್ತ ಗೋವಿಂದಮಠ, ಪಾಂಡುಕೇಶ್ವರ, ಜೋಶಿಮಠ, ಗರುಡಗಂಗಾ, ಚಮೋಲಿ, ಪೀಪಲಕೋಟ, ಕರ್ಣ ಪ್ರಯಾಗ, ರುದ್ರ ಪ್ರಯಾಗ, ಶ್ರೀನಗರ, ತಾಂಡಿ ಮೂಲಕ ಋಷಿಕೇಶಿ, ಹರಿದ್ವಾರ ತಲುಪಿದೆವು. ಮರುದಿನ 5ಗಂಟೆಗೆ ಗಂಗಾನದಿಯಲ್ಲಿ ಕೊನೆಯ ಸ್ನಾನ ಮಾಡಿ ರೇಲ್ವೇ ಸ್ಟೇಷನ್‌ಗೆ ಬಂದು ನವದೆಹಲಿಗೆ ತಲುಪಿದೆವು. ಈ ಚಾರಧಾಮ ಯಾತ್ರೆಯು ನನ್ನ ಜೀವನದ ಅತ್ಯಂತ ಮಹತ್ವವಾದ ಯಾತ್ರೆಯಾಗಿ ನನ್ನ ತನು ಮನದಲ್ಲಿ ಎಂದೂ ಮರೆಯದ ಪವಿತ್ರ ಯಾತ್ರೆಯಾಯಿತು.

***ಸುಮಿತ್ರ ಗೋಸಲ್***

# 'ವಿಶ್ವಮಾನ ಕನ್ನಡ ರತ್ನ ಪ್ರಶಸ್ತಿ' ಪುರಸ್ಕೃತರು

ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ, ಬೆಂಗಳೂರು ಇವರು ಪ್ರತಿ ವರ್ಷವೂ ಕನ್ನಡದ ಸೇವೆ ಮಾಡುತ್ತಿರುವ ವಿವಿಧ ಕ್ಷೇತ್ರಗಳ ಕನ್ನಡಿಗರನ್ನು ಗುರುತಿಸಿ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ, ವಿಶ್ವಮಾನವ ಕನ್ನಡ ರತ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಾ ಬರುತ್ತಿದ್ದಾರೆ. ಅದರಂತೆ ಕುವೆಂಪು ಅವರ 116ನೇ ಜನ್ಮ ದಿನಾಚರಣೆಯ ವರ್ಷವಾಗಿರುವ ಈ ವರ್ಷವೂ ದಿನಾಂಕ 20.01.2020ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನುಬಳಿಗಾರ್ ಅವರಿಗೆ 'ರಾಷ್ಟ್ರಕವಿ ಕುವೆಂಪು ಪ್ರಶಸ್ತಿ'ಯನ್ನು ಹಾಗೂ ದೆಹಲಿಯಲ್ಲಿ ಕನ್ನಡದ ಸೇವೆಯನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಚಂದ್ರಶೇಖರ್ ಎನ್.ಪಿ. ಅವರಿಗೆ 'ವಿಶ್ವಮಾನ ಕನ್ನಡ ರತ್ನ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದ್ದಾರೆ.




ಕುವೆಂಪುರವರ ಮಗಳು, ಸಾಹಿತಿ ಶ್ರೀಮತಿ ತಾರಿಣಿ ಚಿದಾನಂದಗೌಡ ಮತ್ತು ಅಳಿಯ ಡಾ. ಕೆ. ಚಿದಾನಂದಗೌಡ, ವಿಶ್ರಾಂತ ಕುಲಪತಿಗಳು, ಕವಿ ಸಿದ್ದಲಿಂಗಯ್ಯನವರು ಮತ್ತು ಡಾ. ದೊಡ್ಡರಂಗೇಗೌಡರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಪ್ರಶಸ್ತಿ ಪುರಸ್ಕೃತರಾದ ಸಿ.ಎಂ. ನಾಗರಾಜ ಮತ್ತು ಎನ್.ಪಿ. ಚಂದ್ರಶೇಖರ್ ಅವರು ದೆಹಲಿ ಕನ್ನಡಿಗರ ಪ್ರೀತಿಗೆ ಅರ್ಪಣೆ ಮಾಡಿರುವುದಾಗಿ ಹೇಳಿದ್ದಾರೆ. 'ಕನ್ನಡವೇ ಸತ್ಯ-ಕನ್ನಡವೇ ನಿತ್ಯ'



***ಶಿವಪ್ಪ ಎಂ.***



# ಓದುಗರ ಸ್ಪಂದನ


ಮಾನ್ಯರೇ,

ದಿ.ಎನ್.ಪಿ. ಭಟ್ ಅವರ ಭಾವಚಿತ್ರ ಹೊತ್ತ ಜನವರಿ ತಿಂಗಳ ಅಭಿಮತ ಸಂಗ್ರಹ ಯೋಗ್ಯವಾಗಿದೆ. ನುಡಿನಮನಗಳ ಎಲ್ಲ ಬರೆಹಗಳೂ ಆಪ್ತವಾಗಿವೆ.

ಕಳೆದ ಮೇ ತಿಂಗಳಲ್ಲಿ ಭಟ್ ಅವರು ಧಾರವಾಡ ವಿದ್ಯಾವರ್ಧಕ ಸಂಘದ ಒಂದು ದತ್ತಿ ಕಾರ್ಯಕ್ರಮದಲ್ಲಿ ಸಿಕ್ಕಿದ್ದರು. ಮಗಳನ್ನು ವಿಚಾರಿಸಿಕೊಳ್ಳುವಂತೆ ಸುಮಾರು ಹೊತ್ತು ಕೈಹಿಡಿದೇ ದೆಹಲಿಗನ್ನಡಿಗರೆಲ್ಲರನ್ನು ವಿಚಾರಿಸಿದ್ದರು. ಇಂದು ಯೋಚಿಸಿದರೆ ಆ ಭೇಟಿ ಆಕಸ್ಮಿಕವೆನ್ನಲೋ ಇಲ್ಲಾ ಇನ್ನೆಂದೂ ಕಾಣದ ಅವರನ್ನೊಮ್ಮೆ ಕಂಡುಬಿಡು ಎಂದು ವಿಧಿಯೇ ಆ ಅವಕಾಶವನ್ನು ಒದಗಿಸಿತು ಎನ್ನಲೋ ನಾನರಿಯೆ.

ನನ್ನೊಂದಿಗೆ ಅಲ್ಲಿ ಮಾಲತಿ ಪಟ್ಟಣಶೆಟ್ಟಿ, ರಂಜನಾ ಕುಲಕರ್ಣಿ, ದಿ. ಪ್ರಲ್ಹಾದ ನರೇಗಲ್ ಅವರ ಬಂಧುಗಳು, ಸಂಘದ ಪದಾಧಿಕಾರಿಗಳೆಲ್ಲ ಇದ್ದರು. ಆ ಗಡಿಬಿಡಿಯಲ್ಲೂ ಭಟ್ಟರು 'ಅಭಿಮತ' ಚೆನ್ನಾಗಿ ಬರ್ತಿದೆ ಎನ್ನಲು ಮರೆಯಲಿಲ್ಲ.

ಎನ್.ಪಿ.ಭಟ್ಟರು ಹುಟ್ಟುಹಾಕಿದ 'ಅಭಿಮತ' ಮುಖವಾಣಿ ಪತ್ರಿಕೆ ಯಾವ ಅಡೆತಡೆಯಿಲ್ಲದೇ ಮೂರುದಶಕಗಳಿಂದ ಮುನ್ನಡೆಯಿಡುತ್ತಲೇ




ಬಂದಿದೆ. ಆ ಹಾದಿಯಲ್ಲಿ ಅನೇಕರು ಕೈಜೋಡಿಸಿದ್ದಾರೆ. ಅದರಲ್ಲಿ ನಾನೂ ಸಹಭಾಗಿಯಾಗಿದ್ದೆ ಎನ್ನುವ ಸಾರ್ಥಕತೆ ನನ್ನದು. ಶ್ರೀಮತಿ ಉಷಾ ಭರತಾದ್ರಿ ಅವರೊಂದಿಗೆ ಸುದೀರ್ಘವಾದ ೯ ವರುಷಗಳ ಕಾಲ ಅಭಿಮತಕ್ಕಾಗಿ ದುಡಿದ ಕ್ಷಣಗಳನ್ನು ನೆನೆದರೆ ಅಚ್ಚರಿಯಾಗುತ್ತದೆ. ಅದೆಷ್ಟು ವರದಿಗಳನ್ನು ನಡುರಾತ್ರಿಯವರೆಗೂ ಕುಳಿತು ಬರೆದಿದ್ದಿದೆಯೋ, ಆಫೀಸಿನಲ್ಲಿ ಸುಳ್ಳುಹೇಳಿ ಪತ್ರಿಕೆಯ ಕೆಲಸಮಾಡಿದ್ದಿದೆಯೋ. ರಜೆಯ ದಿನದಂದೂ ಆಫೀಸಿಗೆ ಹೋಗುವ ಟೈಮಿಗೆ ತಯಾರಾಗಿ ಸಂಘಕ್ಕೆ ಬರುತ್ತಿದ್ದೆ. ಉಷಾ ಅವರು ಮನೆಗೆಲಸ ಮುಗಿಸಿ ಮಧ್ಯಾಹ್ನದ ಹೊತ್ತು ಡಬ್ಬದಲ್ಲಿ ಬಿಸಿಬೇಳೆ ಅನ್ನ, ಹಿತ್ತಲಿನಲ್ಲಿ ಬಿದ್ದ ಮಾವಿನಕಾಯಿಯ ಉಪ್ಪಿನಕಾಯಿ, ಸಂಕ್ರಾಂತಿಯ ಎಳ್ಳು-ಬೆಲ್ಲ ಹೀಗೆ ಒಂದಿಲ್ಲಾ ಒಂದು ತಿನಿಸನ್ನು ತರುತ್ತಿದ್ದರು. ಮೊನ್ನೆ ಸಂಕ್ರಾಂತಿ ದಿನ ನನಗೆ ನೆನಪಾಗಿದ್ದು ಉಷಾ ಅವರ ಎಳ್ಳು ಬೆಲ್ಲ. ಪಂಡಾರಾ ರೋಡಿನ ಮನೆ ನನಗೆ ನೆಮ್ಮದಿಯ ತಾಣ. ಅಷ್ಟು ಸ್ನೇಹ ಪ್ರೀತಿಯನ್ನು ಉಷಾ ಹನಿಸಿದ್ದಕ್ಕೇ ನನಗೆ ಅವರೊಂದಿಗೆ ಅಭಿಮತಕ್ಕಾಗಿ ಇಷ್ಟು ದೀರ್ಘಕಾಲ ಹುರುಪಿನಿಂದ ಅವರೊಂದಿಗೆ ಕೈಜೋಡಿಸಲು ಸಾಧ್ಯವಾಯ್ತು ಎನ್ನಬಹುದು. ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ಉಷಾ ಭರತಾದ್ರಿ ಅವರಿಗೆ ಮತ್ತೊಮ್ಮೆ ನನ್ನ ಹಾರ್ದಿಕ ಅಭಿನಂದನೆಗಳು.

ಅಭಿಮತ ಹೀಗೆ ಅರ್ಥಪೂರ್ಣವಾಗಿ ಬರುತ್ತಿರಲಿ. ಹೊಸ ಹೊಸ ಬರೆಹಗಳಿಂದ. ಅಂಕಣಗಳಿಂದ ಸಾಹಿತ್ಯಿಕರೂಪವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

***ರೇಣುಕಾ ನಿಡಗುಂದಿ***



**ದೆಹಲಿ ಕರ್ನಾಟಕ ಸಂಘದ**
**ಸುಸಜ್ಜಿತವಾದ ಆರ್ಟ್ ಗ್ಯಾಲರಿ**
**ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ**
**ದೆಹಲಿ ಕರ್ನಾಟಕ ಸಂಘದ**
**ಕಾರ್ಯಾಲಯವನ್ನು ಸಂಪರ್ಕಿಸಿರಿ.**
**ದೂರವಾಣಿ :**
**011–26109615 / 26104818**

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Feb-2020, Vol. No.30, Issue No.5, Price Rs.1/-
RNI Regn. No. 53405/91, DL-SW-1/4016/19-21
Date of Publication : Feb 8th / 9th, Posting Date :10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

# ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಕ್ರಿಕೆಟ್ ಪಂದ್ಯಾವಳಿಯ ದೃಶ್ಯಗಳು













